ಜೆಎಸ್ಎಸ್ ಮಹಾವಿದ್ಯಾಪೀಠ, ಮೈಸೂರು
JSS MAHAVIDYAPEETHA, MYSURU

# ಜೆಎಸ್ಎಸ್ ವಾರ್ತಾಪತ್ರ

ಮಾಸಪತ್ರಿಕೆ

# JSS VARTHAPATHRA

Monthly Magazine

ಸಂಪುಟ 11 ಸಂಚಿಕೆ 3 ಮಾರ್ಚ್ 2026




ಮಾರಿಷಸ್‌ನಲ್ಲಿರುವ ಜೆಎಸ್ಎಸ್ ಸ್ಕೂಲ್ ಆಫ್ ಮೆಡಿಸಿನ್ ಅನ್ನು ಮಾರಿಷಸ್ ಗಣರಾಜ್ಯದ ಘನತೆವೆತ್ತ ಅಧ್ಯಕ್ಷರಾದ ಶ್ರೀ ಧರ್ಮಬೀರ್ ಗೋಖೂಲ್‌ರವರು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಿದರು. ಡಾ. ಬಿ. ಸುರೇಶ್, ಡಾ. ಕವಿರಾಜ್ ಶರ್ಮಾ ಸುಕೋನ್, ಶ್ರೀ ಅನಿಲ್‌ಕುಮಾರ್ ಬಚ್ಚೂ, ಶ್ರೀಮತಿ ಬೃಂದಾ ಗೋಖೂಲ್ ಹಾಗೂ ಶ್ರೀ ಅನುರಾಗ್ ಶ್ರೀವಾತ್ಸವ್‌ರವರುಗಳಿದ್ದಾರೆ. (4 ಫೆಬ್ರವರಿ 2026)



ಬೆಂಗಳೂರಿನಲ್ಲಿರುವ ಸುತ್ತೂರು ಸದನಕ್ಕೆ ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್‌ರವರು ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಆಶೀರ್ವದಿಸಿದರು (24 ಫೆಬ್ರವರಿ 2026)



ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜಿನ ವಿದ್ಯಾರ್ಥಿಗಳು ಸಿವಿಲ್ ನ್ಯಾಯಾಧೀಶರ ಹುದ್ದೆಗೆ ಆಯ್ಕೆಯಾದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಅವರುಗಳಿಗೆ ಆಶೀರ್ವದಿಸಿದರು (5 ಮಾರ್ಚ್ 2026)

# ವ್ಯೋಮಮೂರುತಿ ಅಲ್ಲಮಪ್ರಭುಗಳು ಮಹಾನ್ ದಾರ್ಶನಿಕರು




ಅಲ್ಲಮಪ್ರಭುಗಳು ಈ ಲೋಕ ಕಂಡ ಮಹಾನ್ ದಾರ್ಶನಿಕರು ಎಂದು ಒರಿಸ್ಸಾ ಉಚ್ಚ ನ್ಯಾಯಾಲಯದ ಗೌರವಾನ್ವಿತ ನ್ಯಾಯಮೂರ್ತಿಗಳಾದ ಶ್ರೀ ದೀಕ್ಷಿತ್ ಕೃಷ್ಣ ಶ್ರೀಪಾದ್‌ರವರು ಹೇಳಿದರು.

ಬೆಂಗಳೂರಿನಲ್ಲಿ ದಿನಾಂಕ 28.2.2026ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ Vachanas of Allamaprabhu – Commenatry (Vol.I&II) ಕೃತಿ ಲೋಕಾರ್ಪಣೆಗೊಳಿಸಿ ಮಾತನಾಡುತ್ತಾ ತಿಳಿಸಿದರು. ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರ ಜೀವನದ ಉದ್ದೇಶವೇ ಸತ್ಯದರ್ಶನವಾಗಿತ್ತು. ಅಲ್ಲಮಪ್ರಭುಗಳ ಹಾಗೆಯೇ ಪೂಜ್ಯ ಸಿದ್ಧೇಶ್ವರ ಶ್ರೀಗಳೂ ಸಹ ಬದುಕಿದವರು. ಅಲ್ಲಮಪ್ರಭುಗಳು ವೇದ, ಉಪನಿಷತ್ತು ಮತ್ತು ಪುರಾಣಗಳನ್ನು ಮೀರಿ ನಿಲ್ಲುವಂಥ ವ್ಯಕ್ತಿತ್ವವುಳ್ಳವರಾಗಿದ್ದರು. ಅವರೊಬ್ಬ ಮಹಾನ್ ದಾರ್ಶನಿಕರು. ಭಾರತ ಸಂವಿಧಾನದ ಹಲವಾರು ಅಂಶಗಳನ್ನು ವಚನಕಾರರು 12ನೇ ಶತಮಾನದಲ್ಲೇ ತಮ್ಮ ವಚನಗಳಲ್ಲಿ ಹೇಳಿದ್ದಾರೆ. ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ಮುಂತಾದ ವಚನಕಾರರ ಹಲವಾರು ಚಿಂತನೆಗಳು ಸಂವಿಧಾನದಲ್ಲಿ ಅಡಕವಾಗಿದೆ. ಈಗಿನ ಸಂಸತ್ ವ್ಯವಸ್ಥೆಯನ್ನು 12ನೇ ಶತಮಾನದಲ್ಲಿಯೇ ಬಸವಣ್ಣನವರು ಅನುಭವ ಮಂಟಪದ ಮೂಲಕ ಪ್ರಾರಂಭಿಸಿದರು ಎಂದರು.

ತರ್ಜುಮೆಯು ಯಾವಾಗಲೂ ಬಹಳ ಕಷ್ಟದ ಕೆಲಸ. ಒಂದು ಭಾಷೆಯ ಚಿಂತನೆ, ಭಾವನೆಗಳನ್ನು ಇನ್ನೊಂದು ಭಾಷೆಗೆ ಅನುವಾದ ಮಾಡುವುದು ದುಸ್ಸಾಹಸ. ಭಾರತೀಯ ಭಾಷೆಗಳ ಸಾಹಿತ್ಯ ಮತ್ತು ಚಿಂತನೆಯನ್ನು ಇಂಗ್ಲಿಷ್ ಸೇರಿದಂತೆ ಪಾಶ್ಚಾತ್ಯ ದೇಶಗಳ ಭಾಷೆಗಳಿಗೆ ತರ್ಜುಮೆ ಮಾಡುವುದು ಇನ್ನೂ ಕಷ್ಟ. ಆ ಮಟ್ಟದ ಶಬ್ದಭಂಡಾರ ಸಿಗುವುದಿಲ್ಲ, ಪರಕೀಯ ಭಾಷೆಯಲ್ಲಿ ನಮ್ಮ ಭಾವನೆಗಳನ್ನು ಸಮರ್ಥವಾದ ರೀತಿಯಲ್ಲಿ ಅಭಿವ್ಯಕ್ತಿಗೊಳಿಸುವುದು ಸಾಧ್ಯವಿಲ್ಲ. ಆದರೂ, ನಮ್ಮ ಸಾಹಿತ್ಯವನ್ನು ಪ್ರಪಂಚಕ್ಕೆ ಪರಿಚಯಿಸುವ ದೃಷ್ಟಿಯಿಂದ ಎಷ್ಟು ಸಾಧ್ಯವೋ ಅಷ್ಟನ್ನಾದರು ತರ್ಜುಮೆ ಮಾಡುವುದು ಅನಿವಾರ್ಯ. ಸಂವಿಧಾನದ ಪುಸ್ತಕದಲ್ಲಿ ವೇದ, ಉಪನಿಷತ್ತು, ರಾಮಾಯಣ ಮತ್ತು ಮಹಾಭಾರತ ಮುಂತಾದವುಗಳಿಗೆ ಸಂಬಂಧಿಸಿದಂತೆ 22 ಚಿತ್ರಗಳಿವೆ. ಆದರೆ ಅವುಗಳಲ್ಲಿ ಎಲ್ಲಿಯೂ ಬಸವಣ್ಣನವರು, ಅಲ್ಲಮಪ್ರಭುಗಳ ಚಿತ್ರಗಳಿಲ್ಲ. ಸಂವಿಧಾನಕ್ಕೆ ತಿದ್ದುಪಡಿ ಮಾಡುವ ಮೂಲಕ ವಚನಕಾರರ ಚಿತ್ರಗಳನ್ನು ಸೇರ್ಪಡೆ ಮಾಡಬೇಕು, ಈ ನಿಟ್ಟಿನಲ್ಲಿ ಪ್ರಯತ್ನ ಆಗಬೇಕಾದುದು ಅಗತ್ಯ ಎಂದು ನುಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಕರ್ನಾಟಕ ಸರ್ಕಾರದ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರಾದ ಶ್ರೀ ಎಂ.ಬಿ. ಪಾಟೀಲ್‌ರವರು, ಹನ್ನೆರಡನೇ ಶತಮಾನದಲ್ಲಿ ಆದ ಸಾಮಾಜಿಕ ಕ್ರಾಂತಿಯ ರೂವಾರಿಗಳು ಬಸವಣ್ಣನವರು. ಆ ಕ್ರಾಂತಿಗೆ ಆಧ್ಯಾತ್ಮಿಕ ಉನ್ನತಿಯನ್ನು ಒದಗಿಸಿದವರು ಅಲ್ಲಮಪ್ರಭುಗಳು. ಅಲ್ಲಮಪ್ರಭುಗಳವರದು ಚಲನಶೀಲ ಬದುಕು, ಅವರು ನಿರಂತರವಾಗಿ ಲೋಕಸಂಚಾರ ಮಾಡಿದವರು. ಅಲ್ಲಮಪ್ರಭುಗಳ ಹಾಗೇ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರೂ ಲೋಕಸಂಚಾರವನ್ನು ಮಾಡಿದವರು. ಪೂಜ್ಯ ಸಿದ್ಧೇಶ್ವರ ಮಹಾಸ್ವಾಮಿಗಳು ತಮ್ಮ ಅಂತಿಮ ಪತ್ರದಲ್ಲಿ ಅಲ್ಲಮಪ್ರಭುಗಳ ವಚನವನ್ನು ಉಲ್ಲೇಖಿಸಿದ್ದಾರೆ. ಇವರು ಶತಮಾನದ ಸಂತರು, ಕೊನೆಯ ಉಸಿರಿನ ತನಕ ಅಲ್ಲಮಪ್ರಭುಗಳನ್ನು ಕುರಿತು ಧ್ಯಾನಿಸಿದವರು ಎಂದರು.

ಅಲ್ಲಮಪ್ರಭುಗಳ ವಚನಗಳನ್ನು ಇಂಗಿಷ್‌ಗೆ ತರ್ಜುಮೆ ಮಾಡುವುದು ಬಹಳ ಕಷ್ಟದ ಕೆಲಸ, ಆದರೆ ಪೂಜ್ಯ ದೇಶಿಕೇಂದ್ರ ಮಹಾಸ್ವಾಮಿಗಳ ಸಂಕಲ್ಪವನ್ನು ಪೂಜ್ಯ ಸಿದ್ಧೇಶ್ವರ ಮಹಾಸ್ವಾಮಿಗಳು ಸಾಕಾರಗೊಳಿಸಿದ್ದಾರೆ. ಇಂತಹ ಕಠಿಣವಾದ ಕೆಲಸವನ್ನು ಅವರಲ್ಲದೆ ಬೇರೆ ಯಾರೂ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಶರಣರ ವಚನಗಳು ಜಾಗತಿಕ ಮಟ್ಟದಲ್ಲಿ ಪ್ರಚಾರ ಆಗಬೇಕು ಎಂಬ ಸುತ್ತೂರು ಶ್ರೀಗಳ ಆಶಯದಿಂದ ಈ ಕೃತಿ ರಚಿತವಾಗಿದೆ. ಇದು ಎಲ್ಲಾ ಕಡೆಯೂ ಲಭ್ಯವಾಗುವಂತಾಗಬೇಕು ಎಂದು ತಿಳಿಸಿದರು.

ದಿವ್ಯ ಸಾನ್ನಿಧ್ಯ ವಹಿಸಿದ್ದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು, ನಾಗರಹೊಳೆಯ ಸುಂಕದಕಟ್ಟೆ ಅರಣ್ಯ ಅತಿಥಿಗೃಹದಲ್ಲಿ ಬಸವಣ್ಣನವರ ವಚನಗಳ ಬಗ್ಗೆ ನಡೆದ ಚರ್ಚೆಯ ಪರಿಣಾಮವಾಗಿ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರಿಂದ "ಬಸವೇಶ್ವರ ವಚನ ದೀಪಿಕೆ" ಕೃತಿ ರಚಿತವಾಯಿತು. ಇದರ ಮುಂದುವರಿದ ಭಾಗವಾಗಿ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಅಲ್ಲಮಪ್ರಭುದೇವರ ವಚನ-ನಿರ್ವಚನ ಕೃತಿಯನ್ನು ರಚಿಸಿದರು. ಈ ಕೃತಿಯ ಸ್ವರೂಪ ಬಹಳ ವಿಶಿಷ್ಟವಾಗಿದ್ದು, ಇದು ಕನ್ನಡೇತರರಿಗೂ ಲಭ್ಯವಾಗಲೆಂಬ ಉದ್ದೇಶದಿಂದ ಶ್ರೀ ಸಿದ್ಧೇಶ್ವರ ಸ್ವಾಮಿಗಳ ನೇತೃತ್ವದಲ್ಲಿ ಇದನ್ನು ವಿದ್ವಾಂಸರ ತಂಡ ಅನುವಾದಿಸಿದೆ. ಇದು ಬರಿಯ ಭಾವಾನುವಾದವಲ್ಲ, ಬ್ರಹ್ಮಸೂತ್ರಗಳಿಗೆ ವ್ಯಾಖ್ಯೆಗಳನ್ನು ಬರೆದ ರೀತಿಯಲ್ಲೇ ಈ ಕೃತಿಯ ವ್ಯಾಖ್ಯೆಯೂ ವಿಶೇಷವಾಗಿ ಮೂಡಿಬಂದಿದೆ. ಅಲ್ಲಮಪ್ರಭುಗಳ ಭಾಷೆ ಬೆಡಗಿನ ಭಾಷೆಯಾಗಿದ್ದು,

ಸುಲಭವಾಗಿ ಅರ್ಥವಾಗುವಂಥದಲ್ಲ. ಅವುಗಳನ್ನು ಅರಿಯಲು, ಅರ್ಥೈಸಿಕೊಳ್ಳಲು ಪ್ರಯತ್ನಿಸಬೇಕು. ಈ ಜಗತ್ತಿನಲ್ಲಿ ಕೊನೆಗೆ ಏನೂ ಉಳಿಯುವುದಿಲ್ಲ ಎಂಬ ಆತ್ಯಂತಿಕ ಸತ್ಯವನ್ನು ಅಲ್ಲಮಪ್ರಭುಗಳು ಬಲ್ಲವರಾಗಿದ್ದರು, ಇದನ್ನು ಜನರೂ ಅರ್ಥಮಾಡಿಕೊಂಡಾಗ ಜೀವನ ಸಾರ್ಥಕವಾಗುತ್ತದೆ ಎಂದು ತಿಳಿಸಿದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್‌ರವರು ಕೃತಿಯ ಪರಿಚಯವನ್ನು ಮಾಡಿದರು. ಸಂಪಾದಕೀಯ ಸಮಿತಿಯವರ ಪರವಾಗಿ "ಅಮರ ಚಿತ್ರಕಥಾ" ಮಾಲಿಕೆಯ ನಿವೃತ್ತ ಸಹಾಯಕ ಸಂಪಾದಕರಾದ ಶ್ರೀ ಸುಬ್ಬರಾವ್‌ರವರು ಕೃತಿ ಮೂಡಿಬಂದ ರೀತಿಯನ್ನು ವಿವರಿಸಿದರು. ವಿಜಯಪುರ ಜ್ಞಾನಯೋಗಾಶ್ರಮದ ಅಧ್ಯಕ್ಷರಾದ ಶ್ರೀ ಬಸವಲಿಂಗ ಸ್ವಾಮಿಗಳು ಕೃತಿ ಬಿಡುಗಡೆಯಾಗಿದುದಕ್ಕೆ ಕೃತಜ್ಞತೆ ತಿಳಿಸಿದರು. ಶರಣ ಸಾಹಿತ್ಯ ಪರಿಷತ್ತಿನ ಗೌರವ ಸಲಹೆಗಾರರಾದ ಶ್ರೀ ಗೊ.ರು. ಚನ್ನಬಸಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷರಾದ ಶ್ರೀ ಡಿ.ಆರ್. ಪಾಟೀಲ್‌ರವರು ಸಹ ಮಾತನಾಡಿದರು.

ಶ್ರೀಮತಿ ಆಕಾಂಕ್ಷ ಬಾದಾಮಿಯವರು ಪ್ರಾರ್ಥಿಸಿದರು. ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್‌ರವರು ಸ್ವಾಗತಿಸಿದರು. ಶ್ರೀ ಶ್ರದ್ಧಾನಂದ ಸ್ವಾಮಿಗಳು ಕವನ ವಾಚಿಸಿದರು. ಪ್ರೊ. ಮೊರಬದ ಮಲ್ಲಿಕಾರ್ಜುನರವರು ವಂದಿಸಿದರು. ಶ್ರೀಮತಿ ಸವಿತಾ ಶಿವಕುಮಾರ್‌ರವರು ಕಾರ್ಯಕ್ರಮ ನಿರೂಪಿಸಿದರು.



ವಚನಾಸ್ ಆಫ್ ಅಲ್ಲಮಪ್ರಭು (ಸಂ.1–2) ಕೃತಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಸಹೃದಯ ಗಣ್ಯ ಮಹನೀಯರು

# ಕಾಲೇಜಿನ ಉತ್ಸವಗಳು ವಿದ್ಯಾರ್ಥಿಗಳ ಜ್ಞಾನ ಮತ್ತು ಕೌಶಲವನ್ನು ವೃದ್ಧಿಸುತ್ತವೆ




ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆದ ರಾಜ್ಯ ಮಟ್ಟದ ಮ್ಯಾನ್. ಕಾಮ್. ಫೆಸ್ಟ್ ಆವಿಷ್ಕಾರ–2026 'ಆರೋಹಣ' ಕಾರ್ಯಕ್ರಮದಲ್ಲಿ ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಕೆ. ಹರೀಶ್‌ಗೌಡರವರು ಮಾತನಾಡಿದರು. (6 ಫೆಬ್ರವರಿ 2026)

ಕಾಲೇಜಿನ ಉತ್ಸವಗಳು ವಿದ್ಯಾರ್ಥಿಗಳ ಜ್ಞಾನ ಮತ್ತು ಕೌಶಲವನ್ನು ವೃದ್ಧಿಸುವ ವೇದಿಕೆಗಳು ಎಂದು ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಕೆ. ಹರೀಶ್‌ಗೌಡರವರು ಹೇಳಿದರು.

**ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ದಿನಾಂಕ 6.2.2026ರಂದು ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ ವಿಭಾಗದ ವತಿಯಿಂದ ನಡೆದ ರಾಜ್ಯ ಮಟ್ಟದ ಮ್ಯಾನ್. ಕಾಮ್. ಫೆಸ್ಟ್ ಆವಿಷ್ಕಾರ–2026 'ಆರೋಹಣ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಜೆಎಸ್‌ಎಸ್ ಸಂಸ್ಥೆಯು ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸುತ್ತಿರುವ ಕೊಡುಗೆ ಅಪಾರವಾದುದು. ಈ ಉತ್ಸವ ಜ್ಞಾನ ವಿಸ್ತರಣೆಗೆ ಮತ್ತು ವಿದ್ಯಾರ್ಥಿಗಳ ಕೌಶಲ ಅಭಿವೃದ್ಧಿಗೆ ಪೂರಕವಾಗಿದೆ. ತಾವೆಲ್ಲರೂ ಶಿಕ್ಷಣದ ಜೊತೆಗೆ ಜೀವನ ನಡೆಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು. ವಾಣಿಜ್ಯಶಾಸ್ತ್ರವನ್ನು ಅಧ್ಯಯನ ಮಾಡುವುದರಿಂದ ಹೆಚ್ಚಿನ ಉದ್ಯೋಗಾವಕಾಶಗಳು ದೊರೆಯುತ್ತವೆ ಎಂದರು.

ಮೈಸೂರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಸಹಾಯಕ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಬಿ.ವಿ. ವಿಶ್ವಾಸ್‌ರವರು, ಆರೋಹಣ ಎಂದರೆ ಜೀವನದಲ್ಲಿ ಉತ್ತುಂಗವನ್ನು ಸಾಧಿಸುವುದು, ಉದ್ಯಮಶೀಲತೆಯು ವಾಣಿಜ್ಯ ಅಭಿವೃದ್ಧಿಯ ಮುಖಾಂತರ ದೇಶದ ಬೆಳವಣಿಗೆಗೆ ಸಹಕರಿಸುತ್ತದೆ. ವಿದ್ಯಾರ್ಥಿಗಳು ಆತಂಕವಿಲ್ಲದೆ ಮತ್ತು ನ್ಯಾಯಯುತವಾಗಿ ಪಾಲ್ಗೊಂಡು ಯಶಸ್ಸು ಗಳಿಸಬೇಕು ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತಾರವರು, ವಾಣಿಜ್ಯ ಮತ್ತು ನಿರ್ವಹಣಾ ಕ್ಷೇತ್ರವು ಅತ್ಯಂತ ಮುಂದುವರಿದ ಮತ್ತು ಸ್ಪರ್ಧಾತ್ಮಕ ಕ್ಷೇತ್ರವಾಗಿದೆ. ಇಂತಹ ವೇದಿಕೆಗಳನ್ನು ಬಳಸಿಕೊಂಡು ನಿಮ್ಮ ಜೀವನವನ್ನು ಚೆನ್ನಾಗಿ ಕಟ್ಟಿಕೊಳ್ಳಿ. ವಿದ್ಯಾರ್ಥಿಗಳು ದೃಢವಾದ ಆತ್ಮವಿಶ್ವಾಸದಿಂದ ಬೆಳವಣಿಗೆ ಸಾಧಿಸಿ ಎಂದರು.

ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನರವರು, ನಾವು ಆದರ್ಶ ಉತ್ಪಾದಕ, ವಿತರಕ ಮತ್ತು ಗ್ರಾಹಕರಾಗಬೇಕು. ವಾಣಿಜ್ಯ ಕ್ಷೇತ್ರದಲ್ಲಿ ಪ್ರಗತಿ ಹೊಂದಲು ಏಕ ಮನಸ್ಥಿತಿ ಇರಬೇಕು. ಆವಿಷ್ಕಾರ 2026 ಒಂದು ಅರ್ಥಪೂರ್ಣ ಪ್ರಯತ್ನವಾಗಿದ್ದು, ಪರಮಪೂಜ್ಯರ ಆಶಯಗಳಿಗೆ ಸೂಕ್ತವಾಗಿದೆ ಎಂದು ಅಭಿಪ್ರಾಯಪಟ್ಟರು.

ಪ್ರಾಂಶುಪಾಲರಾದ ಡಾ. ರೇಚಣ್ಣ, ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ವಿ. ಗಂಗಾಧರಸ್ವಾಮಿ, ಮತ್ತು ಮ್ಯಾನ್. – ಕಾಮ್. ಫೆಸ್ಟ್‌ನ ಸಂಚಾಲಕಗಳಾದ ಕು. ಎಂ.ಕೆ. ಉಷಾರಾಣಿ ಮತ್ತು ಡಾ. ಎಸ್. ಗೀತಾ ಉಪಸ್ಥಿತರಿದ್ದರು. ಕಾಲೇಜಿನ ಸಿಬ್ಬಂದಿವರ್ಗ ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕು. ನಿಖಿತಾ ಭಟ್ ಮತ್ತು ತಂಡದವರು ಪ್ರಾರ್ಥಿಸಿದರು. ಕು. ಎಂ.ಆರ್. ಕವನ ಸ್ವಾಗತಿಸಿದರು. ಕು. ಐಶ್ವರ್ಯ ಶಿವಾನಂದ ವಂದಿಸಿದರು. ಕು. ಎನ್. ಪುಣ್ಯ ಕಾರ್ಯಕ್ರಮ ನಿರೂಪಿಸಿದರು.

## ಉದ್ಯೋಗ ಮೇಳ




**ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ** ಸಮರ್ಥನಂ ಅಂಗವಿಕಲರ ಸಂಸ್ಥೆ ಹಾಗೂ ಎಲ್.ಎಸ್.ಇ.ಜಿ. ಫೌಂಡೇಶನ್‌ಗಳ ಸಂಯುಕ್ತಾಶ್ರಯದಲ್ಲಿ ಉದ್ಯೋಗ ಮೇಳವನ್ನು ಹಮ್ಮಿಕೊಳ್ಳಲಾಗಿತ್ತು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಮಾತನಾಡಿ, ಶಿಕ್ಷಣ ಮತ್ತು ಅವಕಾಶಗಳು ವಿದ್ಯಾರ್ಥಿಗಳ ಹಿನ್ನೆಲೆಗೆ ಅನುಗುಣವಾಗಿ ಎಲ್ಲರಿಗೂ ಸಮಾನವಾಗಿ ಲಭ್ಯವಾಗಬೇಕು ಎಂಬ ನಂಬಿಕೆ ನಮ್ಮದು. ಇಂದಿನ ಉದ್ಯೋಗ ಮೇಳವು ಆ ನಂಬಿಕೆಯನ್ನು ಸಾಕಾರಗೊಳಿಸುವ ವೇದಿಕೆಯಾಗಿದ್ದು, ವೈವಿಧ್ಯಮಯ ಜೀವನ ಹಂತಗಳ ವಿದ್ಯಾರ್ಥಿಗಳು ಹಾಗೂ ವೈವಿಧ್ಯತೆಯನ್ನು ಗೌರವಿಸುವ ಕಂಪನಿಗಳನ್ನು ಒಂದೇ ವೇದಿಕೆಯಲ್ಲಿ ಒಟ್ಟುಗೂಡಿಸಿದೆ. ಉದ್ಯೋಗ ಮೇಳವೆಂದರೆ ಕೇವಲ ಕಾರ್ಯಕ್ರಮವಲ್ಲ, ಅದು ಪ್ರೇರಣೆಯೂ ಹೌದು ಹಾಗೂ ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯವನ್ನು

ಪ್ರದರ್ಶಿಸಲು ದೊರೆಯುವ ಸುವರ್ಣಾವಕಾಶವೂ ಹೌದು. ಇಂತಹ ಉದ್ಯೋಗ ಮೇಳಗಳು ಯುವ ಸಮುದಾಯಕ್ಕೆ ಉದ್ಯೋಗಾವಕಾಶಗಳ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ, ಅವರ ಪ್ರತಿಭೆಯನ್ನು ಪ್ರದರ್ಶಿಸಲು ಉತ್ತಮ ವೇದಿಕೆಯಾಗಿವೆ ಎಂದು ತಿಳಿಸಿದರು.

ಪ್ರಾಂಶುಪಾಲರಾದ ಡಾ. ಎಂ. ಪ್ರಭುರವರು ಮಾತನಾಡಿ, ದೇಶದ ಆರ್ಥಿಕ ಪ್ರಗತಿಯಲ್ಲಿ ಉದ್ಯೋಗ ಮಹತ್ವದ ಪಾತ್ರ ವಹಿಸುತ್ತದೆ. ಯುವಜನರು ಉದ್ಯೋಗ ಕ್ಷೇತ್ರಕ್ಕೆ ಪ್ರವೇಶಿಸಲು ನೆರವಾಗುವ ಉದ್ದೇಶದಿಂದಲೇ ಈ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ. ನಿರುದ್ಯೋಗದಿಂದಾಗಿ ಅನೇಕ ದೇಶಗಳ ಅಭಿವೃದ್ಧಿ ಕುಂಠಿತವಾಗುತ್ತಿದೆ. ಹಿಂದೆ ಉದ್ಯೋಗವನ್ನು ಉದ್ಯೋಗಂ ಪುರುಷ ಲಕ್ಷಣಂ ಎಂದು ಕರೆಯಲಾಗುತ್ತಿತ್ತು, ಆದರೆ ಇಂದು ಅದು ಉದ್ಯೋಗಂ ಸರ್ವ ಲಕ್ಷಣವಾಗಿದ್ದು ಎಲ್ಲರಿಗೂ ಅಗತ್ಯವಾಗಿದೆ. ಹಿಂದೆ ಕಾಲೇಜುಗಳಲ್ಲಿ ಉದ್ಯೋಗದಾತರು ಬಂದು ನೇರ ಸಂದರ್ಶನ ನಡೆಸುವ ಪದ್ಧತಿ ಕಡಿಮೆಯಿತ್ತು, ಆದರೆ ಇಂದಿನ ದಿನಗಳಲ್ಲಿ ಉದ್ಯೋಗ ಮೇಳಗಳು ಸಾಮಾನ್ಯವಾಗಿದ್ದು, ಉತ್ತಮ ಪ್ರತಿಭೆಗಳನ್ನು ಆಯ್ಕೆ ಮಾಡಿಕೊಳ್ಳಲು ಸಹಕಾರಿಯಾಗಿವೆ ಎಂದು ಹೇಳಿದರು.

ಸಮರ್ಥನಂ ಅಂಗವಿಕಲರ ಸಂಸ್ಥೆಯ ಬೆಂಗಳೂರು ಕೇಂದ್ರದ ಮುಖ್ಯಸ್ಥರಾದ ಶ್ರೀ ಸುಭಾಷ್ ಚಂದ್ರರವರು ಸಮರ್ಥನಂ ಸಂಸ್ಥೆಯು ಭಾರತದಲ್ಲಿನ ದೃಷ್ಟಿಹೀನರು, ಅಂಗವಿಕಲರು ಹಾಗೂ ಅವಕಾಶ ವಂಚಿತರ ಸಬಲೀಕರಣಕ್ಕಾಗಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ. ಗುಣಮಟ್ಟದ ಶಿಕ್ಷಣ, ವಸತಿ ಸೌಲಭ್ಯ, ಪೌಷ್ಟಿಕ ಆಹಾರ, ವೃತ್ತಿಪರ ತರಬೇತಿ ಹಾಗೂ ಪುನರ್ವಸತಿ ಸೌಲಭ್ಯಗಳನ್ನು ಒದಗಿಸುವ ಮೂಲಕ ಅಂಗವಿಕಲರ ವೈಯಕ್ತಿಕ ಸ್ವಾವಲಂಬನೆಯನ್ನು ಸಾಧಿಸುವುದು ಸಂಸ್ಥೆಯ ಪ್ರಮುಖ ಉದ್ದೇಶವಾಗಿದ್ದು, ಸಮಾಜದಲ್ಲಿ ತಮ್ಮದೇ ಆದ ಗುರುತನ್ನು ನಿರ್ಮಿಸಿಕೊಳ್ಳಲು ಅಂಗವಿಕಲರಿಗೆ ಸಹಾಯ ಮಾಡುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಉದ್ಯೋಗಾಧಿಕಾರಿ ಶ್ರೀ ಜಿ. ಕಾರ್ತಿಕ್, ಸಮರ್ಥನಂ ಸಂಸ್ಥೆಯ ಮೈಸೂರು ವಿಭಾಗದ ಮುಖ್ಯಸ್ಥರಾದ ಶ್ರೀ ಶಿವರಾಜು, ಪ್ರಾಧ್ಯಾಪಕರಾದ ಡಾ. ಬಿ.ಎಲ್. ಕಿರಣ್, ಡಾ. ಸೌಮ್ಯ, ಸಮರ್ಥನಂ ಸಂಸ್ಥೆಯ ಶ್ರೀ ವೀರಭದ್ರ ಪಟೇಲ್, ಶ್ರೀ ಮಹಾಂತೇಶ್, ಶ್ರೀ ಆರ್. ಸುಬ್ರಮಣಿ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಉದ್ಯೋಗ ಮೇಳದಲ್ಲಿ 35ಕ್ಕೂ ಹೆಚ್ಚು ಕಂಪನಿಗಳು ಹಾಗೂ ಸಾವಿರಕ್ಕೂ ಹೆಚ್ಚಿನ ಉದ್ಯೋಗ ಆಕಾಂಕ್ಷಿಗಳು ಭಾಗವಹಿಸಿದ್ದರು.

## ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಹಿರಿಯ ನಾಗರಿಕರ ಆರೈಕೆ ಮತ್ತು ಸುರಕ್ಷತಾ ಜಾಗೃತಿ

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಭಾರತೀಯ ಗುಣಮಟ್ಟ ಮಂಡಳಿ ಮತ್ತು ವಯ ವಿಕಾಸ್ ಸಂಸ್ಥೆಗಳ ಸಹಯೋಗದಲ್ಲಿ ಹಿರಿಯ ನಾಗರಿಕರ ಆರೈಕೆ ಮತ್ತು ಸುರಕ್ಷತೆ ಬಗ್ಗೆ ಎನ್‌ಎಬಿಹೆಚ್ ಪ್ರಮಾಣೀಕರಣ ಮತ್ತು ಮಾನ್ಯತೆಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ದಿನಾಂಕ 9.2.2026 ರಂದು ಆಯೋಜಿಸಲಾಗಿತ್ತು.

ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕರಾದ ಡಾ. ಸಿ.ಪಿ. ಮಧುರವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಾ ಹಿರಿಯ ನಾಗರಿಕರ ಆರೈಕೆ ಕೇಂದ್ರಗಳಿಗೆ ಏಕರೂಪದ ಮತ್ತು ಸುಸಜ್ಜಿತ ನಿಯಮಾವಳಿಗಳು ಅಗತ್ಯವಿದೆ. ಇಂತಹ ಕಾರ್ಯಕ್ರಮಗಳಿಗೆ ಜೆಎಸ್‌ಎಸ್ ಆಸ್ಪತ್ರೆ ಮತ್ತು ಸಂಸ್ಥೆಯು ಸಂಪೂರ್ಣ ಬೆಂಬಲ ನೀಡುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ನಾಗರಿಕರ ಸುಸಜ್ಜಿತ ಆರೈಕೆಗಾಗಿ ಹಲವು ವಿಷಯಗಳ ಮೇಲೆ ಬೆಳಕು ಚೆಲ್ಲಲಾಯಿತು. ಆಸ್ಪತ್ರೆ ಮತ್ತು ಮನೆ ಆರೈಕೆ ಸೇವೆಗಳಲ್ಲಿ ಹಿರಿಯರಿಗೆ ಅಗತ್ಯವಿರುವ ಸುರಕ್ಷತಾ ಪರಿಕರಗಳ ಬಳಕೆ,

ತುರ್ತು ಸೇವೆಗಳು ಮತ್ತು ನೋವು ನಿರ್ವಹಣೆ, ತುರ್ತು ಸಂದರ್ಭಗಳಲ್ಲಿ ತಕ್ಷಣದ ಸ್ಪಂದನೆ ಮತ್ತು ದೀರ್ಘಕಾಲದ ಆರೋಗ್ಯ ಅಪಾಯಗಳನ್ನು ಕಡಿಮೆ ಮಾಡಲು ವಿಶೇಷ ಬೆಂಬಲ, ಪುನರ್ವಸತಿ ಮತ್ತು ದೈನಂದಿನ ಸಹಾಯ, ಹಿರಿಯರು ತಮ್ಮ ಮನೆಯ ಪರಿಸರದಲ್ಲೇ ಸುರಕ್ಷಿತವಾಗಿರಲು ಅಗತ್ಯವಿರುವ ಸಹಾಯಕ ಜೀವನ ಮತ್ತು ದೈನಂದಿನ ಚಟುವಟಿಕೆಗಳಲ್ಲಿ ಸಹಾಯ, ಆಸ್ಪತ್ರೆ ನಂತರದ ಆರೈಕೆಗಳು, ಶಸ್ತ್ರಚಿಕಿತ್ಸೆ ಅಥವಾ ಚಿಕಿತ್ಸೆಯ ನಂತರದ ವಿಶೇಷ ಕಾಳಜಿ ಮತ್ತು ಸರ್ಕಾರಿ ಸೌಲಭ್ಯಗಳ ಮಾಹಿತಿ ಇತ್ಯಾದಿಗಳ ಬಗ್ಗೆ ಚರ್ಚಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸಮುದಾಯದ ವ್ಯಕ್ತಿಗಳು ಮತ್ತು ವಿವಿಧ ಹಿರಿಯ ನಾಗರಿಕರ ಆರೈಕೆ ಕೇಂದ್ರಗಳ ವ್ಯವಸ್ಥಾಪಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನವನ್ನು ಪಡೆದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಆಸ್ಪತ್ರೆಯ ವೃದ್ಧಾರೋಗ ವಿಭಾಗದ ಮುಖ್ಯಸ್ಥರಾದ ಡಾ. ಪ್ರತಿಬಾ ಪೆರೆರಾ, ಶ್ರೀಮತಿ ಹರಿಣಿ ಮತ್ತು ವಯ ವಿಕಾಸ್‌ನ ಶ್ರೀ ಶಂಕರ್, ಶ್ರೀ ಶ್ರೀನಿವಾಸ್ ಮತ್ತು ಇನ್ನಿತರರು ಉಪಸ್ಥಿತರಿದ್ದರು.

---




ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಜರುಗಿದ 288ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ಪಂಡಿತ್ ಎಂ. ವೆಂಕಟೇಶಕುಮಾರ್‌ರವರು ಹಿಂದೂಸ್ತಾನಿ ಗಾಯನ ಪ್ರಸ್ತುತಿ ಪಡಿಸಿದರು. ಹಾರ್ಮೋನಿಯಂನಲ್ಲಿ ಪ್ರೊ. ನರೇಂದ್ರ ಎಲ್. ನಾಯಕ್ ಮತ್ತು ತಬಲದಲ್ಲಿ ಪಂಡಿತ್ ಕೇಶವ ಜೋಷಿಯವರುಗಳು ಸಹಕಾರ ನೀಡಿದರು. (1 ಫೆಬ್ರವರಿ 2026)

## ನಿರಂತರವಾದ ಕಲಿಕೆಯೇ ನಿಜವಾದ ಶಿಕ್ಷಣ




ಇಂದಿನ ಶಿಕ್ಷಣ ಒಳ್ಳೆಯ ಆಲೋಚನೆಗಳನ್ನು ಬೆಳೆಸಬೇಕು. ಉತ್ತಮ ಭವಿಷ್ಯಕ್ಕಾಗಿ ಉತ್ತಮ ಶಿಕ್ಷಣದ ಅವಶ್ಯಕತೆ ತುಂಬಾ ಇದೆ. ವಿದ್ಯಾರ್ಥಿಗಳು ದೊಡ್ಡದಾಗಿ ಯೋಜಿಸಿ, ದೊಡ್ಡದಾಗಿ ಉತ್ತಮ ಕಾರ್ಯಗಳನ್ನು ಮಾಡಿ. ಕಲಿಕೆಯು ಕೇವಲ ಪದವಿಗೆ ಸೀಮಿತವಾಗಬಾರದು. ಕಲಿಕೆಯಲ್ಲಿ ನಿರಂತರತೆ ಇರಬೇಕು. ನಿರಂತರವಾಗಿ ಕ್ಷಣಕ್ಷಣವೂ ಕಲಿಯುವುದು ನಿಜವಾದ ಶಿಕ್ಷಣವಾಗಿದೆ ಎಂದು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳ ಗೌರವ ಪ್ರಧಾನ ಕಾರ್ಯದರ್ಶಿಗಳಾದ ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರು ಹೇಳಿದರು.

**ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ** ದಿನಾಂಕ 10.2.2026 ರಂದು ನಡೆದ 18ನೇ ಪದವೀಧರರ ದಿನಾಚರಣೆಯ ಮುಖ್ಯ ಅತಿಥಿಗಳಾಗಿ ಆಗಮಿಸಿ ಅವರು ಮಾತನಾಡಿದರು. ಶಿಕ್ಷಣ ಸ್ವಾತಂತ್ರ್ಯವನ್ನು ತಂದುಕೊಡಬೇಕು. ಗುಲಾಮಗಿರಿಯಿಂದ ಮುಕ್ತಗೊಳ್ಳುವಂತೆ ಮಾಡುವುದೇ ಶಿಕ್ಷಣ ಎಂದು ಗಾಂಧೀಜಿಯವರು ನಂಬಿದ್ದರು. ಭಾರತೀಯ ಶಿಕ್ಷಣ ಪದ್ಧತಿಯಲ್ಲಿ ಲೌಕಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಎರಡಕ್ಕೂ ಪ್ರಾಧಾನ್ಯತೆ ಇದೆ. ಲೌಕಿಕ ಶಿಕ್ಷಣ ಅನ್ನವನ್ನು ಸಂಪಾದನೆ ಮಾಡುವುದನ್ನು ಹೇಳಿಕೊಡುತ್ತದೆ, ಇದು ಬಹಿರಂಗ ಜೀವನಕ್ಕೆ ಸಂಬಂಧಿಸಿದ್ದು. ಅಧ್ಯಾತ್ಮ ಶಿಕ್ಷಣ ಅಂತರಂಗಕ್ಕೆ ಸಂಬಂಧಿಸಿದ್ದು, ನಾವು ನೀಡುವ ಮತ್ತು ಪಡೆಯುವ ಶಿಕ್ಷಣ ಉತ್ತಮವಾದ ಹೊರನೋಟ ಮತ್ತು ಒಳನೋಟಗಳನ್ನು ನೀಡುವಂತೆ ಇರಬೇಕು. ಇಂದಿನ ಬದುಕನ್ನು ಸಮತೋಲನದಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಇದು ಅಗತ್ಯವಾಗಿದೆ. ಅವಕಾಶಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವುದನ್ನು ವಿದ್ಯಾರ್ಥಿಗಳು ರೂಢಿಸಿಕೊಳ್ಳಿ. ಇಂದು ನಿರಂತರವಾಗಿ ಕೌಶಲ್ಯಗಳನ್ನು ಕಲಿತು ಕಾಲಕಾಲಕ್ಕೆ ಅವುಗಳನ್ನು ಉನ್ನತೀಕರಿಸಿ ಕೊಳ್ಳಬೇಕು. ಇಷ್ಟವಿಲ್ಲದವರ ನಡುವೆ ನಾವು ಬದುಕುವುದನ್ನು ಇಂದು ಕಲಿಯಬೇಕಿದೆ. ಮೌಲ್ಯಗಳನ್ನು ರೂಢಿಸಿಕೊಳ್ಳದೆ ಯಶಸ್ಸನ್ನು ಸಾಧಿಸಲಾಗದು. ಸರಳವಾದ ಜೀವನ ಶೈಲಿಯನ್ನು ರೂಢಿಸಿಕೊಳ್ಳಿ. ನಾವುಗಳು ನಮ್ಮದಲ್ಲದ ಜೀವನವನ್ನು ಅಪ್ಪಿಕೊಳ್ಳಬಾರದು ಎಂದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ

ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ ಅವರು ನೂತನ ಪದವೀಧರರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಸಮಾರಂಭದಲ್ಲಿ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗಗಳಿಂದ ಒಟ್ಟು 998 ವಿದ್ಯಾರ್ಥಿಗಳು ಪದವೀಧರರಾದರು. ಇವರಲ್ಲಿ ಹೆಚ್ಚು ಅಂಕ ಪಡೆದ ಒಟ್ಟು 66 ವಿದ್ಯಾರ್ಥಿಗಳಿಗೆ ಬಹುಮಾನ ಮತ್ತು ಪ್ರಮಾಣ ಪತ್ರಗಳನ್ನು ನೀಡಿ ಪುರಸ್ಕರಿಸಲಾಯಿತು. 16 ಮಂದಿ ವಿದ್ಯಾರ್ಥಿಗಳು ವಿವಿಧ ದತ್ತಿ ಪುರಸ್ಕಾರಕ್ಕೆ ಪಾತ್ರರಾದರು. ಕಾರ್ಯಕ್ರಮದಲ್ಲಿ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಪ್ರಾಸ್ತಾವಿಕ ನುಡಿಗಳೊಂದಿಗೆ ಸ್ವಾಗತಿಸಿದರು. ಕು. ಅದಿತಿ ಹೆಗ್ಡೆ ಮತ್ತು ಕು. ಸಾನ್ನಿಧ್ಯ ಪ್ರಾರ್ಥಿಸಿದರು. ಪ್ರಾಂಶುಪಾಲರಾದ ಡಾ. ಎಂ. ಪ್ರಭು ವಂದಿಸಿದರು. ವೇದಿಕೆಯಲ್ಲಿ ಕಾಲೇಜಿನ ಪರೀಕ್ಷಾ ನಿಯಂತ್ರಣಾಧಿಕಾರಿಗಳಾದ ಡಾ. ಬಿ. ಪ್ರಭುಸ್ವಾಮಿ ಉಪಸ್ಥಿತರಿದ್ದರು. ಡಾ. ಎನ್. ರಾಜೇಂದ್ರ ಪ್ರಸಾದ್‌ರವರು ಕಾರ್ಯಕ್ರಮ ನಿರೂಪಿಸಿದರು. ಪೋಷಕರು ಮತ್ತು ದತ್ತಿ ದಾನಿಗಳು ಭಾಗವಹಿಸಿದ್ದರು.

## ಉದ್ಯೋಗಕ್ಕೆ ಸಂವಹನ ಕೌಶಲ ಮತ್ತು ನಾಯಕತ್ವದ ಗುಣ ಅವಶ್ಯಕ




ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆದ ರಾಜ್ಯ ಮಟ್ಟದ ಮ್ಯಾನ್. ಕಾಮ್. ಫೆಸ್ಟ್ ಆವಿಷ್ಕಾರ–2026 'ಆರೋಹಣ' ಕಾರ್ಯಕ್ರಮದ ಸಮಾರೋಪದಲ್ಲಿ ಕನ್ನಡಪ್ರಭ ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕರಾದ ಶ್ರೀ ಅಂಶಿ ಪ್ರಸನ್ನಕುಮಾರ್‌ರವರು ಮಾತನಾಡಿದರು. (7 ಫೆಬ್ರವರಿ 2026)

ಉದ್ಯೋಗಾವಕಾಶಕ್ಕಾಗಿ ವಿದ್ಯಾರ್ಥಿಗಳು ಸಂವಹನ ಕೌಶಲ ಮತ್ತು ನಾಯಕತ್ವದ ಗುಣವನ್ನು ಬೆಳೆಸಿಕೊಳ್ಳಬೇಕು ಎಂದು ಕನ್ನಡಪ್ರಭ ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕರಾದ ಶ್ರೀ ಅಂಶಿ ಪ್ರಸನ್ನಕುಮಾರ್‌ರವರು ಹೇಳಿದರು.

**ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ ವಿಭಾಗದ ವತಿಯಿಂದ ದಿನಾಂಕ 7.2.2026 ರಂದು ಆಯೋಜಿಸಿದ್ದ ಆವಿಷ್ಕಾರ 2026 ಆರೋಹಣ ರಾಜ್ಯ

ಮಟ್ಟದ ಮ್ಯಾನ್. ಕಾಮ್. ಫೆಸ್ಟ್‌ನ ಸಮಾರೋಪ ಸಮಾರಂಭದಲ್ಲಿ ಮಾತನಾಡುತ್ತಾ ಅವರು ತಿಳಿಸಿದರು. ನಾಯಕತ್ವದ ಗುಣಗಳನ್ನು ಮತ್ತು ಸದೃಢವಾದ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಇಂತಹ ವೇದಿಕೆಗಳು ಪ್ರಧಾನ ಪಾತ್ರವನ್ನು ವಹಿಸುತ್ತವೆ. ಪ್ರಸ್ತುತ ಸಂದರ್ಭದಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳು ದೊರೆಯುತ್ತವೆ. ವಾಣಿಜ್ಯಶಾಸ್ತ್ರದ ವಿದ್ಯಾರ್ಥಿಗಳಿಗೆ ಒಂದು ವಸ್ತುವಿನ ಉತ್ಪಾದನೆ ಮತ್ತು ಮಾರಾಟ ಮಾಡುವ ಕುಶಲತೆ ಇರುತ್ತದೆ. ಭೂಮಿಯಿಂದ ಆಕಾಶದವರೆಗೆ ಮಹಿಳೆಯರು ಗಣನೀಯ ಸಾಧನೆ ಮಾಡಿದ್ದಾರೆ. ತಾವೆಲ್ಲರೂ ಕೌಶಲತೆಯನ್ನು ರೂಢಿಸಿಕೊಳ್ಳಿ ಎಂದರು.

ಮೈಸೂರು ಬ್ಯಾಂಕ್ ಆಫ್ ಬರೋಡದ ಉಪ ಪ್ರಾದೇಶಿಕ ಮುಖ್ಯಸ್ಥರಾದ ಶ್ರೀ ವಿದ್ಯಾಸಾಗರ್ ಮರಾಲ ಮಾತನಾಡಿ, ಪ್ರಸ್ತುತ ಸಂದರ್ಭದಲ್ಲಿ ವಾಣಿಜ್ಯಶಾಸ್ತ್ರವು ಪ್ರಮುಖ ಜ್ಞಾನಶಾಖೆಯಾಗಿದೆ. ಇಂತಹ ವೇದಿಕೆಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳು ಜೀವನದಲ್ಲಿ ಪ್ರಗತಿ ಸಾಧಿಸಿ. ಉನ್ನತ ಶಿಕ್ಷಣದಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ಎಂದು ಸಲಹೆ ನೀಡಿದರು.

ಮೇರಾ ಈವೆಂಟನ್ಸ್ ಸ್ಥಾಪಕರು ಮತ್ತು ಹಿರಿಯ ವಿದ್ಯಾರ್ಥಿನಿಯಾದ ಶ್ರೀಮತಿ ಮೇಘನಾ ರವಿಕುಮಾರ್ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿ ಮಾತನಾಡುತ್ತಾ, ಜೆಎಸ್‌ಎಸ್ ಸಂಸ್ಥೆ ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸುತ್ತಿರುವ ಕೊಡುಗೆ ಅಪಾರವಾದುದು. ನಾನು ಈ ಕಾಲೇಜಿನ ವಿದ್ಯಾರ್ಥಿಯೆನ್ನಲು ಹೆಮ್ಮೆಯಾಗುತ್ತಿದೆ. ಜೀವನದಲ್ಲಿ ಪೂರ್ಣತ್ವ ಸಾಧಿಸಲು ಕ್ರಿಯಾಶೀಲ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಿ ಎಂದರು.

ಮೈಸೂರು ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಗಳಾದ ಶ್ರೀಮತಿ ಕೆ.ಎಸ್. ರೇಖಾ ನಾಡಿಗೆ ಜೆಎಸ್‌ಎಸ್ ಸಂಸ್ಥೆಯ ಕೊಡುಗೆ ಅಪಾರ. ವಿದ್ಯಾರ್ಥಿಗಳು ಆಯ್ದುಕೊಳ್ಳುವ ಕ್ಷೇತ್ರದಲ್ಲಿ ಶ್ರದ್ಧೆಯಿಂದ ತೊಡಗಿಸಿಕೊಂಡು ಸಾಧನೆಯತ್ತ ಮುನ್ನುಗ್ಗಬೇಕು. ವಿದ್ಯಾರ್ಥಿಗಳು ಸಾಮಾಜಿಕ ಜವಾಬ್ದಾರಿಯನ್ನು ರೂಢಿಸಿಕೊಂಡು ದೇಶದ ಪ್ರಗತಿಗೆ ಕೈಜೋಡಿಸಬೇಕು ಎಂದರು.

ಪ್ರಾಂಶುಪಾಲರಾದ ಡಾ. ರೇಚಣ್ಣ, ಡಾ. ವಿ. ಗಂಗಾಧರಸ್ವಾಮಿ ಕು ಎಂ.ಕೆ. ಉಷಾರಾಣಿ ಮತ್ತು ಡಾ. ಎಸ್. ಗೀತಾ ಉಪಸ್ಥಿತರಿದ್ದರು. ಕಾಲೇಜಿನ ಸಿಬ್ಬಂದಿ ವರ್ಗದ ಸದಸ್ಯರು ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅಂತಿಮ ಬಿಬಿಎ ವಿದ್ಯಾರ್ಥಿನಿ ಕು. ಪುಣ್ಯ ಆವಿಷ್ಕಾರ –2026 ಆರೋಹಣ ಫೆಸ್ಟ್‌ನ ವರದಿ ಮಂಡಿಸಿದರು. ಮೈಸೂರಿನ ಸೇಫಿಯೆಂಟ್ ಕಾಲೇಜ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಚಾಂಪಿಯನ್‌ಷಿಪ್ ಎಸ್‌ಬಿಆರ್‌ಆರ್ ಮತ್ತು ಮಹಾಜನ ಪ್ರಥಮ ದರ್ಜೆ ಕಾಲೇಜು ರನ್ನರ್ ಅಪ್ ಪ್ರಶಸ್ತಿಯನ್ನು ಪಡೆದರು.

ಕು. ನಿಖಿತಾ ಭಟ್ ಮತ್ತು ತಂಡದವರು ಪ್ರಾರ್ಥಿಸಿದರು. ಕು. ಎಂ.ಆರ್. ಕವನ ಸ್ವಾಗತಿಸಿದರು. ಕು. ಕೆ.ವಿ. ಐಶ್ವರ್ಯ ವಂದಿಸಿದರು. ಕು. ಎಂ. ಹರ್ಷಿತಾ ಮತ್ತು ಕು. ಬಿ.ಎಸ್. ವಿನುತಾ ಕಾರ್ಯಕ್ರಮ ನಿರೂಪಿಸಿಸಿದರು.


**ಮಾಸಿಕ ಸಾಮೂಹಿಕ ವಿವಾಹ 2026**

**ಸುತ್ತೂರು ಶ್ರೀಕ್ಷೇತ್ರ**

**ಮೇ 11 ಸೋಮವಾರ**

**ವಿವರಗಳಿಗೆ ಸಂಪರ್ಕಿಸಿ : ಆಡಳಿತಾಧಿಕಾರಿಗಳು, ಜೆಎಸ್‌ಎಸ್ ಸಂಸ್ಥೆಗಳು ಸುತ್ತೂರು**

**ದೂರವಾಣಿ : 08221–232223, 232224**

# ಜಿನೋಮಿಕ್ಸ್‌ನಿಂದ ಮಹತ್ವದ ಬದಲಾವಣೆ ಸಾಧ್ಯ




ಜೆಎಸ್‌ಎಸ್ ಮಹಿಳಾ ಕಾಲೇಜಿನ ಜೈವಿಕ ತಂತ್ರಜ್ಞಾನ ವಿಭಾಗದ ವತಿಯಿಂದ ನಡೆದ ಜಿನೋಮಿಕ್ಸ್ ವಿಷಯ ಕುರಿತ ವಿಶೇಷ ಪರಿಚಯಾತ್ಮಕ ಕಾರ್ಯಕ್ರಮವನ್ನು ಡಾ. ಮಮತಾ ಶೇಖರ್‌ರವರು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು. (9 ಫೆಬ್ರವರಿ 2026)

**ಜೆಎಸ್‌ಎಸ್ ಮಹಿಳಾ ಕಾಲೇಜಿನ ಜೈವಿಕ ತಂತ್ರಜ್ಞಾನ** ವಿಭಾಗದ ವತಿಯಿಂದ ಜಿನೋಮಿಕ್ಸ್ ವಿಷಯ ಕುರಿತು ವಿಶೇಷ ಪರಿಚಯಾತ್ಮಕ ಕಾರ್ಯಕ್ರಮವನ್ನು ದಿನಾಂಕ 9.2.2026 ರಂದು ಆಯೋಜಿಸಲಾಗಿತ್ತು.

ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾದ ಇಂಡಿಯನ್ ಅಮೇರಿಕನ್ ಇಂಟರ್ನ್ಯಾಷನಲ್ ಚೇಂಬರ್ ಆಫ್ ಕಾಮರ್ಸ್‌ನ ಸದಸ್ಯರು ಹಾಗೂ ಡಿಜಿಟಲ್ ಹೆಲ್ತ್ – ಬೆಂಚ್ ಅಂತಾರಾಷ್ಟ್ರೀಯ ಸಲಹೆಗಾರರಾದ ಡಾ. ಮಮತಾ ಶೇಖರ್‌ರವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಇಂದಿನ ವಿಜ್ಞಾನ ಯುಗದಲ್ಲಿ ಜಿನೋಮಿಕ್ಸ್ ಪ್ರಮುಖವಾದ ಸಂಶೋಧನಾ ಕ್ಷೇತ್ರವಾಗಿ ಹೊರಹೊಮ್ಮಿದೆ. ಆರೋಗ್ಯ, ಕೃಷಿ, ಔಷಧೋದ್ಯಮ ಹಾಗೂ ಪರಿಸರ ವಿಜ್ಞಾನದಲ್ಲಿ ಮಹತ್ವದ ಬದಲಾವಣೆಗಳನ್ನು ತರುತ್ತಿದೆ. ಜೀವಿಗಳ ಸಂಪೂರ್ಣ ಜನನಕೋಶಗಳ ಅಧ್ಯಯನವೇ ಜಿನೋಮಿಕ್ಸ್ ಆಗಿದ್ದು, ಇದರ ಮೂಲಕ ಅನೇಕ ಅನುವಂಶಿಕ ರೋಗಗಳ ಮೂಲ ಕಾರಣಗಳನ್ನು ಪತ್ತೆಹಚ್ಚಲು ಸಾಧ್ಯವಾಗಿದೆ. ಅಲ್ಲದೆ ಕೃಷಿಯಲ್ಲಿ ಉತ್ತಮ ಬೆಳೆಯ ಅಭಿವೃದ್ಧಿ, ರೋಗ ನಿರೋಧಕ ತಳಿಗಳ ಉತ್ಪಾದನೆ ಮತ್ತು ಆಹಾರ ಭದ್ರತೆ ಸಾಧನೆಯಲ್ಲಿ ಜಿನೋಮಿಕ್ಸ್‌ನ ಉಪಯೋಗ ಹೆಚ್ಚಿದೆ ಎಂದು ತಿಳಿಸಿದರು.

ಪ್ರಾಂಶುಪಾಲರಾದ ಡಾ. ರೇಚಣ್ಣರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ವಿಭಾಗದ ಮುಖ್ಯಸ್ಥರಾದ ಡಾ. ಅಭಿಜಿತ್ ಎಂ. ಸಿಂಗ್, ಸಹಾಯಕ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

# ಕಾಲೇಜಿನ ಹಬ್ಬಗಳಿಂದ ಸೌಹಾರ್ದತೆ ಅಭಿವೃದ್ಧಿ




ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆದ ರಾಜ್ಯ ಮಟ್ಟದ ವಿಸ್ತಾರ –2026 ಲಾಂಛನ ಬಿಡುಗಡೆ ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿದರು. (10 ಫೆಬ್ರವರಿ 2026)

ಕಾಲೇಜಿನ ಹಬ್ಬಗಳು ಒಗ್ಗಟ್ಟು ಮತ್ತು ಸೌಹಾರ್ದ ಭಾವನೆ ಬೆಳೆಸಲು ಉತ್ತಮ ವೇದಿಕೆಗಳಾಗಿವೆ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕರಾದ ಶ್ರೀ ಬಿ. ನಿರಂಜನಮೂರ್ತಿಯವರು ಅಭಿಪ್ರಾಯಪಟ್ಟರು.

**ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ಸೈನ್ಸ್ ರೋಸ್ಟ್ರಮ್ ವತಿಯಿಂದ ದಿನಾಂಕ 10.2.2026ರಂದು ನಡೆದ ರಾಜ್ಯ ಮಟ್ಟದ ವಿಸ್ತಾರ –2026 ಲಾಂಛನ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಕಾಲೇಜಿನ ಹಬ್ಬಗಳು ಒಗ್ಗಟ್ಟು ಮತ್ತು ಸೌಹಾರ್ದತೆ ಭಾವನೆ ಬೆಳೆಸಲು ಉತ್ತಮ ವೇದಿಕೆಗಳಾಗಿವೆ. ವಿಸ್ತಾರ ಎಂಬುದು ವಿದ್ಯಾರ್ಥಿಗಳಲ್ಲಿರುವ ಕ್ರಿಯಾಶೀಲತೆ ಮತ್ತು ಸೃಜನಶೀಲತೆಗೆ ಸಾಕ್ಷಿಯಾಗಿದೆ ಎಂದು ಅಭಿಪ್ರಾಯಪಟ್ಟರು.

ಲಾಂಛನ ಅನಾವರಣಗೊಳಿಸಿದ ಹಾಡುಗಾರರಾದ ಶ್ರೀ ದೀಪಕ್ ನಾಯಕ್‌ರವರು ಮಾತನಾಡುತ್ತಾ, ವಿದ್ಯಾರ್ಥಿಗಳು ಫಲಿತಾಂಶದ ಬಗ್ಗೆ ಯೋಚಿಸದೆ ಸ್ಪರ್ಧೆಗಳಲ್ಲಿ ಭಾಗವಹಿಸಿ ಎಂದರು.

ಕನ್ನಡ ಧಾರಾವಾಹಿ ಕಲಾವಿದರಾದ ಶ್ರೀಮತಿ ಸುಷ್ಮಾ ನಾಣಯ್ಯರವರು ಮಾತನಾಡುತ್ತಾ, ತಮ್ಮ ಅಭಿನಯ ಆರಂಭಗೊಂಡಿದ್ದು ಜೆಎಸ್‌ಎಸ್ ಮಹಿಳಾ ಕಾಲೇಜಿನಿಂದಲೇ. ಪಠ್ಯದಂತೆ ಪಠ್ಯೇತರ ಚಟುವಟಿಕೆಗಳು ಬಹು ಮುಖ್ಯ ವಿದ್ಯಾರ್ಥಿಗಳು ತಾವು ಆಯ್ದುಕೊಂಡಿರುವ ವಿಷಯದಲ್ಲಿ ಸತತ ಅಧ್ಯಯನಶೀಲತೆ ಹೊಂದುವ ಮೂಲಕ ಗುರಿ ಸಾಧಿಸಿ ಎಂದರು.

ಪ್ರಾಂಶುಪಾಲರಾದ ಡಾ. ರೇಚಣ್ಣ, ಪರೀಕ್ಷಾ ನಿಯಂತ್ರಣಾಧಿಕಾರಿಗಳಾದ ಶ್ರೀ ಎಂ.ಎಂ. ಸ್ವಾಮಿ, ಸಂಚಾಲಕರಾದ ಶ್ರೀ ಡಿ.ಬಿ. ಯಶವಂತ್ ಮತ್ತು ಶ್ರೀಮತಿ ಪಿ.ಆರ್. ರಾಜೇಶ್ವರಿ ಉಪಸ್ಥಿತರಿದ್ದರು. ಕಾಲೇಜಿನ ಸಿಬ್ಬಂದಿ ವರ್ಗದ ಸದಸ್ಯರು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕು. ಧಾತ್ರಿ ಮತ್ತು ತಂಡದವರು ಪ್ರಾರ್ಥಿಸಿದರು. ಕು. ವಂದನಾ ವಿವೇಕ್ ಸ್ವಾಗತಿಸಿದರು. ಕು. ಪರಿಣಿತ ಪ್ರಥಮ ವಂದಿಸಿದರು. ಕು. ಸಹನಾ ಸಂಗಪ್ಪ ಕಾರ್ಯಕ್ರಮ ನಿರೂಪಿಸಿದರು.

ಫೆಸ್ಟ್‌ನ ವಿವಿಧ ಸ್ಪರ್ಧಾ ಕಾರ್ಯಕ್ರಮಗಳ ಲಾಂಛನಗಳನ್ನೂ ಅನಾವರಣಗೊಳಿಸಲಾಯಿತು.

## ತಂತ್ರಜ್ಞಾನ ಉದ್ಯಮದ ಹೊಸತನ: ಸೈಬರ್ ಭದ್ರತೆ, ಎಐ ಮತ್ತು ವೆಬ್ ಅಭಿವೃದ್ಧಿ



ಮೈಸೂರಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ಉದ್ಯಮ ಪ್ರವೃತ್ತಿಗಳು, ತಂತ್ರಜ್ಞಾನಗಳು: ಸೈಬರ್ ಭದ್ರತೆ, ಎಐ ಮತ್ತು ವೆಬ್ ಅಭಿವೃದ್ಧಿ ಕುರಿತ ಕಾರ್ಯಾಗಾರವನ್ನು ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಡಾ. ಜಿ. ಹೇಮಂತ್‌ಕುಮಾರ್‌ರವರು ಉದ್ಘಾಟಿಸಿದರು. (17 ಫೆಬ್ರವರಿ 2026)

**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಪದವಿ ಗಣಕ ವಿಜ್ಞಾನ ವಿಭಾಗದ ವತಿಯಿಂದ** ಉದ್ಯಮ ಪ್ರವೃತ್ತಿಗಳು, ತಂತ್ರಜ್ಞಾನಗಳು: ಸೈಬರ್ ಭದ್ರತೆ, ಎಐ ಮತ್ತು ವೆಬ್ ಅಭಿವೃದ್ಧಿ ಕುರಿತು ದಿನಾಂಕ 17.2.2026ರಂದು ಒಂದು ದಿನದ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಡಾ. ಜಿ. ಹೇಮಂತ್‌ಕುಮಾರ್‌ರವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಎಐ ಮತ್ತು ಸೈಬರ್ ಭದ್ರತೆ ನಮ್ಮ ಡಿಜಿಟಲ್ ಭವಿಷ್ಯದ ಅವಳಿ ಸ್ತಂಭಗಳಾಗಿವೆ. ತಂತ್ರಜ್ಞಾನವು ಪ್ರತಿಯೊಂದು ಆಧುನಿಕ ಪ್ರಯತ್ನದ ಹೈ-ಸ್ಪೀಡ್ ಮೆದುಳಿನಂತೆ ಕಾರ್ಯನಿರ್ವಹಿಸುತ್ತದೆ, ಆದರೆ ಅದು ಮಾನವ ಅಂತಃಪ್ರಜ್ಞೆಗೆ ಪಾಲುದಾರನಾಗಿ ಉಳಿದಿದೆ, ಎಂದಿಗೂ ಬದಲಿಯಾಗಿಲ್ಲ ಎಂದರು.

ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯರವರು ಸೈಬರ್ ಸುರಕ್ಷತೆಯನ್ನು ಕಲಿಯುವುದರಿಂದ ಅನ್‌ಲೈನ್ ಬೆದರಿಕೆಗಳಿಂದ ಡೇಟಾ ಮತ್ತು ಗೌಪ್ಯತೆಯನ್ನು ರಕ್ಷಿಸಲು ಸಹಾಯ ಮಾಡುತ್ತದೆ. ಇದು ಹ್ಯಾಕಿಂಗ್ ಮತ್ತು ಮಾಲ್‌ವೇರ್‌ನಂತಹ ಸೈಬರ್ ಅಪಾಯಗಳ ಬಗ್ಗೆ ಜಾಗೃತಿ ಮೂಡಿಸುತ್ತದೆ. ಇಂದಿನ ಡಿಜಿಟಲ್ ಜಗತ್ತಿನಲ್ಲಿ ಬಲವಾದ ವೃತ್ತಿ ಅವಕಾಶಗಳನ್ನು ಸಹ ನೀಡುತ್ತದೆ ಎಂದು ತಿಳಿಸಿದರು.

ಪ್ರಾಂಶುಪಾಲರಾದ ಡಾ. ಎಂ. ಪ್ರಭು ಮಾತನಾಡಿ, ಆಂಥ್ರೋಪಿಕ್ ಅಮೆರಿಕದ ತಂತ್ರಜ್ಞಾನ ಕ್ಷೇತ್ರದಲ್ಲಿ ದೈತ್ಯ ಸಂಸ್ಥೆಯಾಗಿ ಮಾರ್ಪಟ್ಟಿದೆ. ಟೆಕ್ಸಾಸ್ ಮತ್ತು ನ್ಯೂಯಾರ್ಕ್‌ನಾದ್ಯಂತ ದತ್ತಾಂಶ ಕೇಂದ್ರಗಳಿಗೆ ಬೃಹತ್ ಹೂಡಿಕೆಯನ್ನು ಸುರಿಯುತ್ತಿದೆ. ಅದರ ಕ್ಲೌಡ್ ಉಪಕರಣಗಳು ಫಾರ್ಚೂನ್ 10 ರ ಹೆಚ್ಚಿನ ಭಾಗಕ್ಕೆ ಶಕ್ತಿ ತುಂಬುತ್ತಿವೆ ಎಂದು ತಿಳಿಸಿದರು.

ವಿಭಾಗದ ಮುಖ್ಯಸ್ಥರಾದ ಡಾ. ವಿದ್ಯಾಶಂಕರರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಹಾಜರಿದ್ದರು. ಕು. ಕ್ಷೀರ ಶಾನಭೋಗ್ ಮತ್ತು ಕು. ಚಿನ್ಮಯಿ ಪ್ರಾರ್ಥನೆ ಸಲ್ಲಿಸಿದರು. ಶ್ರೀಮತಿ ಎಲ್.ಎನ್. ಶುಭ ಸ್ವಾಗತಿಸಿದರು ಮತ್ತು ಶ್ರೀಮತಿ ಬಿ. ಸುಶ್ಮಾ ವಂದಿಸಿದರು. ಶ್ರೀ ಎಚ್.ಪಿ. ಪೂರ್ಣಪ್ರಕಾಶ್ ಕಾರ್ಯಕ್ರಮವನ್ನು ನಿರೂಪಿಸಿದರು.

## ಎಚ್‌ಐವಿ ಕುರಿತು ಅರಿವಿನ ಕಾರ್ಯಕ್ರಮ



**ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಐಸಿಟಿಸಿಯ ವಿಭಾಗದವರಿಂದ** ಹೆಚ್‌ಐವಿ ಏಡ್ಸ್ ಕುರಿತು ಅರಿವಿನ ಮಾಸಾಚರಣೆ – 2025ರ ಪ್ರಯುಕ್ತ ದಿನಾಂಕ 16.2.2026ರಂದು ಜೆಎಸ್‌ಎಸ್ ಶುಶ್ರೂಷ ವಿದ್ಯಾರ್ಥಿಗಳಿಗೆ ಪೋಸ್ಟರ್ ಪ್ರಸ್ತುತಿಯನ್ನು ಆಯೋಜಿಸಲಾಗಿತ್ತು. ವಿದ್ಯಾರ್ಥಿಗಳು ಬಹಳ ಸಕ್ರಿಯವಾಗಿ ಹಾಗೂ ಉತ್ಸಾಹದಿಂದ ಕ್ರಿಯಾತ್ಮಕವಾಗಿ ಪೋಸ್ಟರ್‌ಗಳನ್ನು ಸಿದ್ಧಪಡಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು.

ದಿನಾಂಕ 17.2.2026ರಂದು ಹೆಚ್‌ಐವಿ ಏಡ್ಸ್ ಅರಿವು ಕುರಿತು ಜೆಎಸ್‌ಎಸ್ ಆಸ್ಪತ್ರೆಯ ಮೈಕ್ರೋಬಯಾಲಜಿ ವಿಭಾಗದ ವೈರಲ್ ಲೋಡ್ ಅಧಿಕಾರಿಗಳಾದ ಶ್ರೀಮತಿ ಮಹೇಶ್ವರಿರವರು ಉಪನ್ಯಾಸ ನೀಡಿದರು. ಹೆಚ್.ಐ.ವಿ. ಎಂದರೇನು, ರೋಗ ಹರಡುವ ವಿಧಾನಗಳು, ಗುಣಲಕ್ಷಣಗಳು, ರೋಗ ಪತ್ತೆ ಹಚ್ಚುವ ಕ್ರಮಗಳು, ತಡೆಗಟ್ಟುವಿಕೆ ಹಾಗೂ ಚಿಕಿತ್ಸಾ ಕ್ರಮಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು. ಪ್ರಾಂಶುಪಾಲರಾದ ಶ್ರೀಮತಿ ಡಿ.ಎನ್. ರೇಣುಕಾದೇವಿರವರು ಮಾತನಾಡಿ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ಜ್ಞಾನದ ಜೊತೆಗೆ ಆಧುನಿಕ ತಂತ್ರಜ್ಞಾನಗಳ ಬಗ್ಗೆ ಅರಿವು ಹೆಚ್ಚಿಸುವಲ್ಲಿ ಬಹು ಮುಖ್ಯ ಪಾತ್ರ ವಹಿಸುತ್ತದೆ ಎಂದು ತಿಳಿಸಿದರು.

ಪೋಸ್ಟರ್ ಪ್ರಸ್ತುತಿಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನವನ್ನು ವಿತರಿಸಲಾಯಿತು. ಮೊದಲನೇ ಬಹುಮಾನವನ್ನು ಕು. ಪ್ರಿಯಾಂಕರವರು, ಎರಡನೇ ಬಹುಮಾನವನ್ನು ಕು. ಎಂ.ಜೆ. ಮಾನಸರವರು, ತೃತೀಯ ಬಹುಮಾನವನ್ನು ಕು. ರೆಜಿಸೋನ ಹಾಗೂ ಕು. ಎಂ.ಕೆ. ಸೌಂದರ್ಯರವರು ಹಾಗೂ ಸಮಾಧಾನಕರ ಬಹುಮಾನವನ್ನು ಕು. ಟೆನ್ಸಿನ್ ಚೊಯಾಂಗ್, ಕು. ಟೆನ್ಸಿನ್ ಜೋಂಪ, ಕು. ಪಿ.ಕೆ. ದಾನಿಯ, ಕು. ಎಂ.ಬಿ. ಸಿಂಚನ, ಕು. ಬಿ. ಪವಿತ್ರಾ ಹಾಗೂ ಕು. ಟೆನ್ಸಿನ್ ಸೆರಿಂಗ್‌ರವರು ಪಡೆದುಕೊಂಡರು. ತೀರ್ಪುಗಾರರಾಗಿ ಜೆಎಸ್‌ಎಸ್ ಆಸ್ಪತ್ರೆಯ ಐಸಿಟಿಸಿ ವಿಭಾಗದ ಸಮಾಲೋಚಕರಾದ ಶ್ರೀಮತಿ ಬಿ. ನಂದಿನಿಯವರು ಹಾಗೂ ಲ್ಯಾಬ್ ಟೆಕ್ನಿಷಿಯನ್ ಶ್ರೀಮತಿ ಆಶಾರವರು ಆಗಮಿಸಿದ್ದರು.

# ಸಂವಹನ ಮತ್ತು ಮೃದು ಕೌಶಲ್ಯ 21ನೇ ಶತಮಾನದ ಅಗತ್ಯ




ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆದ ಸಂವಹನ ಮತ್ತು ಮೃದು ಕೌಶಲ್ಯಗಳು ವಿಷಯ ಕುರಿತ ಕಾರ್ಯಾಗಾರವನ್ನು ಮೈಸೂರು ವಿಶ್ವವಿದ್ಯಾನಿಲಯದ ವೃತ್ತಿ ಕೇಂದ್ರದ ಸಂಯೋಜಕರಾದ ಪ್ರೊ. ಆರ್ ಮಹೇಶ್‌ರವರು ಉದ್ಘಾಟಿಸಿ ಮಾತನಾಡಿದರು. (20 ಫೆಬ್ರವರಿ 2026)

21ನೇ ಶತಮಾನದಲ್ಲಿ ಸಂವಹನ ಮತ್ತು ಮೃದು ಕೌಶಲ್ಯಗಳು ಅತ್ಯಗತ್ಯ ಎಂದು ಮೈಸೂರು ವಿಶ್ವವಿದ್ಯಾನಿಲಯದ ವೃತ್ತಿ ಕೇಂದ್ರದ ಸಂಯೋಜಕರಾದ ಪ್ರೊ. ಆರ್ ಮಹೇಶ್‌ರವರು ಹೇಳಿದರು.

**ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ಮೈಸೂರು ವಿಶ್ವವಿದ್ಯಾನಿಲಯದ ವೃತ್ತಿಕೇಂದ್ರದ ಸಹಯೋಗದೊಂದಿಗೆ ಇತಿಹಾಸ ವಿಭಾಗ ಮತ್ತು ಪ್ಲೇಸ್‌ಮೆಂಟ್ ಸಮಿತಿ ವತಿಯಿಂದ ದಿನಾಂಕ 20.2.2026ರಂದು ಆಯೋಜಿಸಿದ್ದ ಸಂವಹನ ಮತ್ತು ಮೃದು ಕೌಶಲ್ಯಗಳು ವಿಷಯ ಕುರಿತು ನಡೆದ ಕಾರ್ಯಾಗಾರದಲ್ಲಿ ಮಾತನಾಡುತ್ತಾ ತಿಳಿಸಿದರು. 21ನೇ ಶತಮಾನದಲ್ಲಿ ಸಂವಹನ ಮತ್ತು ಮೃದು ಕೌಶಲ್ಯಗಳು ಅತ್ಯಗತ್ಯ. ವಿದ್ಯಾರ್ಥಿಗಳು ಉತ್ತಮ ಭಾಷಾ ಸಂವಹನಕೌಶಲ್ಯ ಹೊಂದುವ ಮೂಲಕ ಬೆಳವಣಿಗೆ ಸಾಧಿಸಬೇಕು. ಮೃದು ಕೌಶಲ್ಯಗಳಿಲ್ಲದ ಬೌದ್ಧಿಕ ಸಾಮರ್ಥ್ಯವು ಕಡಿಮೆ ಮೌಲ್ಯವನ್ನು ಹೊಂದಿರುತ್ತದೆ. ಇಂತಹ ಕಾರ್ಯಾಗಾರಗಳು ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಸಹಾಯ ಮಾಡುತ್ತವೆ. ಜೊತೆಗೆ ಭವಿಷ್ಯದಲ್ಲಿ ಉದ್ಯೋಗದ ಯೋಗ್ಯತೆಯನ್ನು ಹೆಚ್ಚಿಸುತ್ತವೆ ಎಂದು ಹೇಳಿದರು.

ಪರೀಕ್ಷಾ ನಿಯಂತ್ರಣಾಧಿಕಾರಿಯಾದ ಶ್ರೀ ಎಂ.ಎಂ. ಸ್ವಾಮಿಯವರು ಮಾತನಾಡಿ, ವಿದ್ಯಾರ್ಥಿಗಳು ಉತ್ತಮ ಅಂಕಗಳ ಜೊತೆಗೆ ಕೌಶಲ್ಯಗಳನ್ನು ಗಳಿಸಿಕೊಳ್ಳಿ. ಸಂವಹನ ಕೌಶಲ್ಯಗಳಿಲ್ಲದ ಜ್ಞಾನವು ನಿಷ್ಪ್ರಯೋಜಕ. ವಿದ್ಯಾರ್ಥಿಗಳು ಈ ಕಾರ್ಯಾಗಾರದ ಪೂರ್ಣ ಪ್ರಯೋಜನವನ್ನು ಪಡೆಯಬೇಕು ಎಂದು ಸಲಹೆ ನೀಡಿದರು.

ಪ್ರಾಂಶುಪಾಲರಾದ ಡಾ. ರೇಚಣ್ಣ ಅಧ್ಯಕ್ಷತೆ ವಹಿಸಿದ್ದರು. ಪ್ಲೇಸ್‌ಮೆಂಟ್ ಅಧಿಕಾರಿ ಶ್ರೀ ವಿ. ಉಮೇಶ್ ಮತ್ತು ಇತಿಹಾಸ ವಿಭಾಗದ ಮುಖ್ಯಸ್ಥರಾದ ಡಾ. ಎ.ಜಿ. ಧರ್ಮೇಶ ಉಪಸ್ಥಿತರಿದ್ದರು. ಅಧ್ಯಾಪಕ ವೃಂದ ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕು. ಕೆ. ಧಾತ್ರಿ ಮತ್ತು ತಂಡದವರು ಪ್ರಾರ್ಥಿಸಿದರು. ಕು. ಆರ್. ಅವನಿ ಸ್ವಾಗತಿಸಿದರು. ಕು. ಎಂ.ಜೆ. ಚಂದನಾ ವಂದಿಸಿದರು. ಕು. ಆರ್.ಪಿ. ಸೃಷ್ಟಿ ಕಾರ್ಯಕ್ರಮ ನಿರೂಪಿಸಿದರು.

# ಜಾಗತಿಕ ಸವಾಲುಗಳನ್ನು ಮೆಟ್ಟಿನಿಲ್ಲಲು ವಿಜ್ಞಾನ ಸಹಕಾರಿ




ಮೈಸೂರಿನ ಎಸ್‌ಜೆಸಿಇ ಆವರಣದ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದಲ್ಲಿ ನಡೆದ ಅಂತಾರಾಷ್ಟ್ರೀಯ ಸಮ್ಮೇಳನವನ್ನು ವಿಶ್ರಾಂತ ಕುಲಪತಿಗಳಾದ ಪ್ರೊ. ಕೆ.ಎಸ್ ರಂಗಪ್ಪನವರು ಉದ್ಘಾಟಿಸಿದರು. (18 ಫೆಬ್ರವರಿ 2026)

ಜಾಗತಿಕ ಸವಾಲುಗಳನ್ನು ಮೆಟ್ಟಿನಿಲ್ಲಲು ವಿಜ್ಞಾನದ ಸಹಕಾರ ಅತೀ ಅಗತ್ಯ ಎಂದು ವಿಶ್ರಾಂತ ಕುಲಪತಿಗಳಾದ ಪ್ರೊ. ಕೆ.ಎಸ್ ರಂಗಪ್ಪನವರು ಹೇಳಿದರು.

**ಮೈಸೂರಿನ ಎಸ್‌ಜೆಸಿಇ ಆವರಣದ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯವು** ಜಪಾನಿನ ಹೋಕೈಡೊ ವಿವಿ ಸಹಯೋಗದಲ್ಲಿ ದಿನಾಂಕ 18.2.2026 ರಂದು ಆಯೋಜಿಸಿದ್ದ ಭಾರತ – ಜಪಾನ್ ಶೈಕ್ಷಣಿಕ ವಿನಿಮಯ ಕಾರ್ಯಕ್ರಮದ ಅಂಗವಾಗಿ ಅಯೋಜಿಸಿದ್ದ ರಸಾಯನ ವಿಜ್ಞಾನ ಮತ್ತು ಆಹಾರದ ನಡುವಿನ ಸೇತುವೆ– ಸುಸ್ಥಿರ ಸಮಾಜಕ್ಕೆ ಒಂದು ಸಂಯೋಜಿತ ವಿಧಾನ ಕುರಿತ ಅಂತಾರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು. ಕಳೆದ ಹಲವು ವರ್ಷಗಳಿಂದ ಭಾರತ ಮತ್ತು ಜಪಾನ್ ಉತ್ತಮ ಸಹಕಾರ ಹೊಂದಿದೆ. ಜಾಣ್ಮೆ, ಚುರುಕು ಮತ್ತು ಶಿಸ್ತಿಗೆ ಹೆಸರಾದ ಜಪಾನಿನ ವಿದ್ಯಾರ್ಥಿಗಳು ಹಾಗೂ ನಮ್ಮ ಭಾರತದ ವಿದ್ಯಾರ್ಥಿಗಳು ಜೊತೆಗೂಡಿ ಜಾಗತಿಕವಾಗಿ ದೇಶಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವ ದಿಕ್ಕಿನಲ್ಲಿ ಕಾರ್ಯ ಪ್ರವೃತ್ತವಾಗಬೇಕು. ವಿಜ್ಞಾನಕ್ಕೆ ಗಡಿ ಎಂಬುದಿಲ್ಲ. ವಿವಿಧ ದೇಶ–ಸಂಸ್ಕೃತಿಗಳ ನಡುವೆ ಜ್ಞಾನದ ವಿನಿಮಯವು ಸವಾಲು ಎದುರಿಸಲು ಹಾಗೂ ಸುಸ್ಥಿರ ಕ್ರಮಗಳನ್ನು ಕೈಗೊಳ್ಳಲು ಅನುಕೂಲವಾಗುತ್ತವೆ ಎಂದು ತಿಳಿಸಿದರು.

ಹೋಕೈಡೊ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರೊ. ತೇರೂಸೋನೆ ಜಪಾನಿನ ತಾಂತ್ರಿಕತೆ ಹಾಗೂ ಭಾರತದ ವಿದ್ಯಾರ್ಥಿಗಳ ಮೆದುಳು ಸೇರಿದರೆ ಯಶಸ್ಸು ಖಂಡಿತ ಎಂದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ, ಜೆಎಸ್‌ಎಸ್ ಎಎಚ್‌ಇಆರ್‌ನ ಸಮಕುಲಾಧಿಪತಿಗಳಾದ ಡಾ. ಬಿ. ಸುರೇಶ್, ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಸಂತೋಷ್‌ಕುಮಾರ್, ಕೇಂದ್ರ ಕಾಫಿ ಸಂಶೋಧನಾ ಸಂಸ್ಥೆ ನಿರ್ದೇಶಕರಾದ ಡಾ. ಎಂ. ಸೆಂಥಿಲ್‌ಕುಮಾರ್, ಜೆಎಸ್‌ಎಸ್ ಎಸ್‌ಟಿಯು ಕುಲಸಚಿವರಾದ ಪ್ರೊ. ಎಸ್. ಎ. ಧನರಾಜ್, ಎಸ್‌ಜೆಸಿಇ ಪ್ರಾಂಶುಪಾಲರಾದ ಡಾ. ಸಿ. ನಟರಾಜು ಹಾಗೂ ಉಪ ಪ್ರಾಂಶುಪಾಲರಾದ ಪ್ರೊ. ಪಿ. ಮಲ್ಲು ಮುಂತಾದವರು ಉಪಸ್ಥಿತರಿದ್ದರು.

# ಕೃತಕ ಬುದ್ಧಿಮತ್ತೆ ಉದ್ಯಮಕ್ಕೆ ಭಾರತವೇ ಸಾರ್ವಭೌಮ



ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಉದ್ಘಾಟಿಸಿದರು. (20 ಫೆಬ್ರವರಿ 2026)

ತಂತ್ರಜ್ಞಾನ ಮತ್ತು ವಿಜ್ಞಾನ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ಭಾರತ ತನ್ನದೇ ಆದ ವಿಶಿಷ್ಟ ಹಾದಿಯಲ್ಲಿ ಬಳಸುತ್ತಿದೆ. ವಿಶ್ವದ ಕೃತಕ ಬುದ್ಧಿಮತ್ತೆ ಉದ್ಯಮಕ್ಕೆ ಭಾರತವೇ ಮುಂದೆ ಸಾರ್ವಭೌಮ ಆಗಬಲ್ಲುದು ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ ರವರು ಹೇಳಿದರು.

**ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ** ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ವಿಭಾಗವು ಐಕ್ಯುಎಸಿ ಸಹಯೋಗದೊಂದಿಗೆ ದಿನಾಂಕ 20.2.2026ರಂದು ಹಮ್ಮಿಕೊಂಡಿದ್ದ 'ಡಿಜಿಟಲ್ ಪರಿವರ್ತನೆ ಮತ್ತು ಸುಸ್ಥಿರ ಬೆಳವಣಿಗೆ: ಹಣಕಾಸು ವ್ಯವಸ್ಥೆಯ ಮರು ವಿನ್ಯಾಸ' ಎಂಬ ವಿಷಯ ಕುರಿತ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಜಗತ್ತು ಇಂದು ತಂತ್ರಜ್ಞಾನದಲ್ಲಿ ನಾಗಾಲೋಟದಲ್ಲಿ ಮುನ್ನುಗ್ಗುತ್ತಿದೆ. ಸರ್ಕಾರದ ಆಡಳಿತ ಹಾಗೂ ಅನೇಕ ಯೋಜನೆಗಳು, ವಾಣಿಜ್ಯ, ಕೃಷಿ, ಕೈಗಾರಿಕೆ, ಆರೋಗ್ಯ, ಶಿಕ್ಷಣ ಎಲ್ಲವೂ ಇಂದು ಆಧುನಿಕ ತಂತ್ರಜ್ಞಾನದ ವೇಗಕ್ಕೆ ಹೊಂದಿಕೊಳ್ಳುತ್ತಿದೆ. ಕೃತಕ ಬುದ್ಧಿಮತ್ತೆ ತಂತ್ರಜ್ಞಾನವು ಪರಿಚಯಗೊಂಡಮೇಲೆ ಜಗತ್ತಿನ ನಡಿಗೆ ಭಿನ್ನವಾಗುತ್ತಿದೆ. ಎಲ್ಲಾ ಕ್ಷೇತ್ರಗಳಲ್ಲಿಯೂ ಇದು ತನ್ನ ಛಾಪನ್ನು ಮೂಡಿಸಿದೆ. ಇದರ ಬಳಕೆಯಲ್ಲಿ ಭಾರತ ಮುಂದಿದೆ. ಜಗತ್ತಿನಲ್ಲಿ ಇಂದು ಆಯ್ಕೆಯ ಅವಕಾಶಗಳು ಹೆಚ್ಚಾಗಿವೆ. ಹಾಗೆಯೇ ಇಂದು ಉದ್ಭವವಾಗುವ ಸಮಸ್ಯೆಗಳಿಗೆ ವೇಗವಾಗಿ ಪರಿಹಾರಗಳು ಕೂಡ ಸಿಗುತ್ತಿವೆ. ತಂತ್ರಜ್ಞಾನವು ಹೆಚ್ಚು ಹೆಚ್ಚು ನವೀಕೃತಗೊಂಡಂತೆ ಜಗತ್ತಿನ ಆರ್ಥಿಕತೆ ದಿನ ದಿನವೂ ಬದಲಾಗುತ್ತಿದೆ. ಮನುಷ್ಯನ ಜೀವನದ ವೇಗವೂ ಹೆಚ್ಚಾಗಿದೆ. ಕೃತಕ ಬುದ್ಧಿಮತ್ತೆ ತಂತ್ರಜ್ಞಾನವು ಎಲ್ಲರನ್ನು ತನ್ನ ವೇಗಕ್ಕೆ ಕರೆದೊಯ್ಯಲು ಹವಣಿಸುತ್ತಿದೆ. ಸೈಬರ್ ಅಪರಾಧಗಳೂ ಕೂಡ ಅಷ್ಟೇ ಹೆಚ್ಚುತ್ತಿವೆ. ಭಾರತದಲ್ಲಿ ಈ ಅಪರಾಧಗಳ ಸಂಖ್ಯೆ ಹೆಚ್ಚು. ಆದರೂ ಡಿಜಿಟಲ್ ಮಾಧ್ಯಮದ ಹಣಕಾಸು, ಆರ್ಥಿಕ ವ್ಯವಹಾರಗಳಲ್ಲಿ ನಾವು ಮುಂದಿದ್ದೇವೆ. ಕೇಂದ್ರ ಸರ್ಕಾರ ಹಾಗೂ ರಾಜ್ಯ

ಸರ್ಕಾರಗಳು ಈ ಆಧುನಿಕ ತಂತ್ರಜ್ಞಾನಗಳನ್ನು ಜನರಿಗೆ ಹಾಗೂ ಇಡೀ ವ್ಯವಸ್ಥೆಗೆ ಅನುಕೂಲಕರವಾಗಿ, ಸರಳವಾಗಿ ಪರಿಚಯಿಸಲು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಶಿಕ್ಷಣ ಸಂಸ್ಥೆಗಳು ಈ ನಿಟ್ಟಿನಲ್ಲಿ ಹೊಸ ಹೆಜ್ಜೆಗಳನ್ನು ಇಡುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಬೆಂಗಳೂರಿನ ರಾಮಯ್ಯ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್‌ನ ಹಣಕಾಸು ಮತ್ತು ಬಿಎಫ್‌ಎಸ್‌ಐ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಕೆ.ವಿ. ಕಿರಣ್‌ಕುಮಾರ್‌ರವರು, ಭಾರತವು ಡಿಜಿಟಲ್ ಮಾಧ್ಯಮದಲ್ಲಿ ಅಭೂತಪೂರ್ವ ಬದಲಾವಣೆಯನ್ನು ಹೊಂದುತ್ತಿದೆ. ಅದು ಈಗಾಗಲೇ ನಮಗೆ ಅನುಭವಕ್ಕೆ ಬಂದಿದೆ. ಮುಂದೆ ಈ ಬದಲಾವಣೆ ಇನ್ನೂ ಹೆಚ್ಚಾಗಬಹುದು. ಭಾರತದ ತಲಾ ಆದಾಯವೂ ಕೂಡ ಇತ್ತೀಚೆಗೆ ಪ್ರಗತಿಯ ಹಾದಿಯಲ್ಲಿದೆ. ಇದಕ್ಕೆ ನಮ್ಮ ತಂತ್ರಜ್ಞಾನದ ಬೆಳವಣಿಗೆ ಹಾಗೂ ವ್ಯವಸ್ಥಿತ ಆರ್ಥಿಕ ಮತ್ತು ವಾಣಿಜ್ಯ ವಹಿವಾಟುಗಳು, ವ್ಯಾಪಾರಗಳು, ಹೊಸ ಹೊಸ ಉತ್ಪನ್ನಗಳ ಮೇಲೆ ಗ್ರಾಹಕರ ಒಲವು, ಗ್ರಾಹಕರ ತಾಂತ್ರಿಕ ಜ್ಞಾನದಲ್ಲಿನ ಬೆಳವಣಿಗೆಗಳು ಕಾರಣ. ಭಾರತವು ಇಂದು ಕೌಶಲ್ಯಾಭಿವೃದ್ಧಿ ಹಾಗೂ ಉತ್ಪನ್ನಗಳ ಉತ್ಪಾದನೆಯಲ್ಲಿ ಆರೋಗ್ಯಕರ ಬೆಳವಣಿಗೆಯನ್ನು ಕಾಣುತ್ತಿದೆ. ವಾಣಿಜ್ಯ ಕ್ಷೇತ್ರದ ಮೇಲೆ ಕೃತಕ ಬುದ್ಧಿಮತ್ತೆ ಪ್ರಭಾವ ಹಾಗೂ ಅದರ ಬಳಕೆಗಳು ಹೆಚ್ಚಾಗುತ್ತಿವೆ ಎಂದರು.

ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನರವರು, ತಂತ್ರಜ್ಞಾನವು ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಗಣನೀಯವಾಗಿ ನವೀಕೃತಗೊಳ್ಳುತ್ತಿದೆ. ವಾಣಿಜ್ಯ ಕ್ಷೇತ್ರದಲ್ಲಿಯೂ ಇದು ಅನೇಕ ಹೊಸ ಹೊಸ ಉಪಯುಕ್ತ ಬಳಕೆಯ ಸಾಧ್ಯತೆಗಳನ್ನು ತಂದಿದೆ. ಇದಕ್ಕೆ ಸಕಾರಾತ್ಮಕವಾಗಿ ನಾವು ತೆರೆದುಕೊಳ್ಳಬೇಕು. ವಾಣಿಜ್ಯ ಕ್ಷೇತ್ರವು ಒಂದು ದೇಶದ ಆರ್ಥಿಕ ಆಧಾರ ಸ್ಥಂಭ. ದೇಶದ ಸಂಸ್ಕೃತಿ, ಆಡಳಿತ, ರಾಜಕೀಯ ಎಲ್ಲದರ ಮೇಲೆ ಇದು ಪರಿಣಾಮ ಬೀರುತ್ತದೆ. ಹನ್ನೆರಡನೆಯ ಶತಮಾನದಲ್ಲಿಯೇ ನಮ್ಮ ಶರಣರು ಕಾಯಕ ತತ್ವದ ಮೂಲಕ ಸುಸ್ಥಿರ ಆರ್ಥಿಕ ಸುಭದ್ರತೆಗೆ ಬುನಾದಿ ಹಾಕಿದ್ದರು. ಇಂದಿನ ಆಧುನಿಕತೆ ತಾಂತ್ರಿಕ ಅವಕಾಶಗಳು ಹೊಸ ಸಾಧ್ಯತೆಗಳನ್ನು ನೀಡಿದ್ದರೂ ಕೆಲವು ಗಾಬರಿಗಳಿಗೂ ಕಾರಣವಾಗಿವೆ. ಇವುಗಳ ಬಗ್ಗೆ ಸ್ಪಷ್ಟತೆ, ಖಚಿತತೆ ಅಗತ್ಯ. ಆದರ್ಶ ಉತ್ಪಾದಕ, ವಿತರಕ, ವಿವೇಕಶಾಲಿ ಗ್ರಾಹಕ ಇಂದು ಮುಖ್ಯ. ಸಮಾಜಮುಖಿ ಸದೃಢ ಹಾಗೂ ಸುಸ್ಥಿರ ಅಭಿವೃದ್ಧಿಗೆ ನೆರವಾಗಬಲ್ಲ ಇಂತಹ ಕಾರ್ಯಕ್ರಮಗಳು ಅಗತ್ಯ ಎಂದು ಹೇಳಿದರು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು, ಇಂದಿನ ಜಾಗತಿಕ ಆರ್ಥಿಕತೆ ಬದಲಾವಣೆ, ತಾಂತ್ರಿಕ ವ್ಯತ್ಯಯ, ಜನಸಾಂಖ್ಯಿಕ ಬದಲಾವಣೆಗಳು ಹಾಗೂ ಭೌಗೋಳಿಕ ಹಾಗೂ ರಾಜಕೀಯ ಪುನರ್ ವ್ಯವಸ್ಥೆಗಳ ಪರಿಣಾಮವಾಗಿ ಅಪೂರ್ವ ಪರಿವರ್ತನೆಗಳನ್ನು ಅನುಭವಿಸುತ್ತಿದ್ದೇವೆ. ಸಂಯುಕ್ತ ರಾಷ್ಟ್ರಗಳ ಸುಸ್ಥಿರ ಅಭಿವೃದ್ಧಿ ಗುರಿಗಳು ಇತ್ತೀಚಿನ ಮೌಲ್ಯಮಾಪನಗಳ ಅನ್ವಯ ಸುಮಾರು ಶೇಕಡ 85 ರಷ್ಟು ಹಾದಿ ತಪ್ಪಿವೆ. ಅಂತಾರಾಷ್ಟ್ರೀಯ ವರದಿಗಳ ಪ್ರಕಾರ ಸುಸ್ಥಿರ ಅಭಿವೃದ್ಧಿ ಜಾಗತಿಕ ಮಟ್ಟದಲ್ಲಿ ಕುಂಠಿತಗೊಂಡಿದೆ. ಜಿಡಿಪಿ ಬಲವಾದ ಬೆಳವಣಿಗೆಯೊಂದಿಗೆ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯ ಸನ್ನಿವೇಶಗಳಿದ್ದರೂ ಬಡತನ, ಹಸಿವು, ಅಸಮಾನತೆ, ಕೌಶಲ್ಯದ ಕೊರತೆ ಹಾಗೂ ಹವಾಮಾನ ತಡೆಶಕ್ತಿಯಲ್ಲಿನ ಕೊರತೆಗಳಂತಹ ಸಮಸ್ಯೆಗಳಿವೆ. ಅಂತಾರಾಷ್ಟ್ರೀಯ ವರದಿಗಳ ಪ್ರಕಾರ ಜಾಗತಿಕವಾಗಿ ಸ್ಥಿರ ಅಭಿವೃದ್ಧಿ ಗುರಿಯು ಮಂದಗತಿಯಲ್ಲಿದೆ. ಕಳೆದ ಐವತ್ತು ವರ್ಷಗಳಲ್ಲಿ ಹವಾಮಾನ ಸಂಬಂಧಿತ ಪ್ರಕೃತಿ ವಿಕೋಪಗಳು ಐದುಪಟ್ಟು ಹೆಚ್ಚಾಗಿ, ಮಹತ್ವದ ಆರ್ಥಿಕ ನಷ್ಟಗಳಿಗೆ ಕಾರಣವಾಗಿವೆ. ಸುಸ್ಥಿರ ಅಭಿವೃದ್ಧಿ, ಆರ್ಥಿಕ ಭದ್ರತೆ, ಆರ್ಥಿಕ ಪರಿವರ್ತನೆ, ಸುಧಾರಿತ ಆಡಳಿತ ಮತ್ತು ಸಮಗ್ರ ಜಾಗತಿಕ ದೃಷ್ಟಿಕೋನದ ಅಗತ್ಯತೆ ಇದೆ. ಹಣಕಾಸು ಸೇವೆಗಳು ಈಗ ಡಿಜಿಟಲ್, ಸ್ವಯಂ ಚಾಲಿತ ಮತ್ತು ಜಾಗತಿಕವಾಗಿ ಸರಳವಾಗಿ ಲಭ್ಯವಿವೆ. ಇಂತಹ ಸಮ್ಮೇಳನಗಳು ಜ್ಞಾನ ವಿನಿಮಯ,

ನೀತಿ ಸಂವಾದ, ಉದ್ಯಮ ಮತ್ತು ಶೈಕ್ಷಣಿಕ ಸಹಕಾರ ಹಾಗೂ ಸಂಶೋಧನೆಗೆ ಉತ್ತೇಜನ ನೀಡುತ್ತವೆ ಹಾಗೂ ಸ್ಥಿರ ಮತ್ತು ಪರಿಣಾಮಕಾರಿ ರಾಷ್ಟ್ರೀಯ ಬೆಳವಣಿಗೆಗೆ ಕೊಡುಗೆ ನೀಡುತ್ತವೆ ಎಂದು ಅಭಿಪ್ರಾಯ ಪಟ್ಟರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಂ. ಪ್ರಭುರವರು ಸ್ವಾಗತಿಸಿದರು. ಕು. ಪ್ರಿಯಾಂಕ ಹಾಗೂ ಕು. ಮೇಘನ ಪ್ರಾರ್ಥಿಸಿದರು. ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಎನ್. ದಿಲೀಪ್‌ರವರು ವಂದಿಸಿದರು. ಕು. ಧನುಷ್ ನಿರೂಪಿಸಿದರು.

## ಪರಿಚಯಾತ್ಮಕ ಕಾರ್ಯಕ್ರಮ



**ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ದಿನಾಂಕ 3.2.2026ರಂದು ಗಣಕ ವಿಜ್ಞಾನ ವಿಭಾಗದ ವತಿಯಿಂದ ಪರಿಚಯಾತ್ಮಕ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಂಪನ್ಮೂಲ ವ್ಯಕ್ತಿಗಳಾಗಿ ಮೈಸೂರಿನ ಲೆಟ್ಸ್ ಪ್ರೊ ಅಕಾಡೆಮಿಯ ಶ್ರೀಮತಿ ತನುಷ ನಂದಿಶ್, ಶ್ರೀ ಕೆ.ವಿ. ಅನುಪ್ ಹಾಗು ಶ್ರೀ ವಿವೇಕ್‌ರವರು ಆಗಮಿಸಿದ್ದರು.

ಶ್ರೀಮತಿ ತನುಷ ನಂದೀಶ್‌ರವರು ಮಾತನಾಡಿ ವಿದ್ಯಾರ್ಥಿಗಳು ತಮ್ಮ ಆಸಕ್ತಿಗೆ ಅನುಗುಣವಾಗಿ ಯೋಜನೆಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಜ್ಞಾನದ ಜೊತೆಗೆ ಕೌಶಲ್ಯಗಳು ಬಹಳ ಮುಖ್ಯ ಎಂದರು.

ಶ್ರಿ ಅನುಪ್‌ರವರು ಮಾತನಾಡಿ ವಿದ್ಯಾರ್ಥಿಗಳು ಯೋಜನೆಗಳ ಮೂಲಕ ನೈಜ ಸಮಸ್ಯೆಗಳನ್ನು ಪರಿಹರಿಸಬಹುದು. ಇಟರ್ನ್‌ಶಿಪ್‌ಗಳ ಮೂಲಕ ಕೆಲಸದ ಅನುಭವ ಪಡೆಯಬಹುದು, ಕಂಪನಿಗಳ ಕೆಲಸದ ವಾತಾವರಣವನ್ನು ಅರಿತು ಕೊಳ್ಳಬಹುದು ಹಾಗೂ ಭವಿಷ್ಯದ ಉದ್ಯೋಗಕ್ಕೆ ತಯಾರಾಗಬಹುದು ಎಂದು ತಿಳಿಸಿದರು.

ಶ್ರೀ ವಿವೇಕ್‌ರವರು ಮಾತನಾಡಿ ಸಮಯವನ್ನು ಸದುಪಯೋಗಪಡಿಸಿಕೊಳ್ಳಬೇಕು ಹಾಗೂ ಸ್ವತಂತ್ರವಾಗಿ ಬದುಕುವುದನ್ನು ಕಲಿತು ತಮ್ಮ ವೈಯಕ್ತಿಕ ಕೆಲಸಗಳನ್ನು ನಿರ್ವಹಿಸಬೇಕು ಎಂದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಹೆಚ್.ಎಸ್. ಕೊಂಗಳಪ್ಪರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಗಣಕ ವಿಜ್ಞಾನ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಕೆ.ಎನ್. ನಾಗವೇಣಿ, ವಿಭಾಗದ ಅಧ್ಯಾಪಕರುಗಳು ಹಾಗೂ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

# ಅಂತಾರಾಷ್ಟ್ರೀಯ ಮಾತೃಭಾಷಾ ದಿನಾಚರಣೆ



ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯ ವತಿಯಿಂದ ಮೈಸೂರಿನ ಗೋಪಾಲಪುರ ಗ್ರಾಮದಲ್ಲಿ ನಡೆದ ಅಂತಾರಾಷ್ಟ್ರೀಯ ಮಾತೃಭಾಷಾ ದಿನಾಚರಣೆಯಲ್ಲಿ ಉಪನ್ಯಾಸಕರಾದ ಶ್ರೀ ಶಿವಕುಮಾರ್‌ರವರು ಮಾತನಾಡಿದರು. (21 ಫೆಬ್ರವರಿ 2026)

**ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯ ವತಿಯಿಂದ** ಮೈಸೂರಿನ ಗೋಪಾಲಪುರ ಗ್ರಾಮದಲ್ಲಿ ಅಂತಾರಾಷ್ಟ್ರೀಯ ಮಾತೃಭಾಷಾ ದಿನ ಹಾಗೂ ಅಸಿಸ್ಟೆಂಟ್ ಹ್ಯಾಂಡ್ ಎಂಬ್ರಾಯಿಡರಿ ಮತ್ತು ಅಸಿಸ್ಟೆಂಟ್ ಟೆಕ್ಸ್‌ಟೈಲ್ ಪ್ರಿಂಟಿಂಗ್ ತರಬೇತಿ ಪಡೆದ ಫಲಾನುಭವಿಗಳಿಗೆ ಪ್ರಮಾಣಪತ್ರ ವಿತರಣೆ ಕಾರ್ಯಕ್ರಮವನ್ನು ದಿನಾಂಕ 21.2.2026ರಂದು ಆಯೋಜಿಸಲಾಗಿತ್ತು.

ಮೈಸೂರಿನ ಚಾಮರಾಜ ಜೋಡಿ ರಸ್ತೆಯ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಶ್ರೀ ಶಿವಕುಮಾರ್‌ರವರು ಮಾತನಾಡುತ್ತಾ, ಭಾಷೆ ಎಂದರೆ ಜನರ ನಡುವೆ ಸಂವಹನಕ್ಕೆ ಇರುವಂತಹ ಮಾತು, ನಮ್ಮ ಭಾವನೆಗಳನ್ನು ವ್ಯಕ್ತ ಪಡಿಸಲು ಇರುವಂತಹ ಒಂದು ಮಾಧ್ಯಮ, ನಮ್ಮ ಮನಸ್ಸಿನ ಒಳಗಡೆಯ ಮಾತುಗಳನ್ನು ಹಂಚಿಕೊಳ್ಳವುದಕ್ಕೆ ಭಾಷೆ ಮುಖ್ಯವಾಗಿದೆ. ಭಾಷೆ ಎನ್ನವುದು ಎಲ್ಲ ಮಾನವರಿಗೂ ಅವಶ್ಯಕವಾಗಿದೆ. ಪ್ರಪಂಚದಲ್ಲಿ ಪ್ರತಿಯೊಂದು ಪ್ರಾಣಿಗಳಿಗೆ ಅದರದೇ ಆದ ಭಾಷೆ ಇದೆ. ಆದರೆ ಮನುಷ್ಯರಿಗೆ ತಮ್ಮದೇ ಆದ ಒಂದು ಔಪಚಾರಿಕ ಭಾಷೆ ಇದೆ. ಹಾಗೆಯೇ ಭಾಷೆಗೆ ಹುಟ್ಟು ಮತ್ತು ಸಾವು ಕೂಡ ಇದೆ. ಏಕೆಂದರೆ ಹಲವು ಭಾಷೆಗಳು ಹುಟ್ಟುತ್ತಲೇ ಇವೆ, ಹಾಗೆಯೇ ಕೆಲವು ಭಾಷೆಗಳು ನಶಿಸಿ ಹೋಗುತ್ತಿವೆ. ಜಗತ್ತಿನಲ್ಲಿ 2025 ಅಂಕಿ ಅಂಶಗಳ ಪ್ರಕಾರ 7,150 ಭಾಷೆಗಳಿವೆ. ಆದರೆ ಅವುಗಳಲ್ಲಿ 3000 ಭಾಷೆಗಳು ಅಳಿವಿನ ಹಂಚಿನಲ್ಲಿವೆ. ನಮ್ಮ ಭಾಷೆಗಳನ್ನು ಉಳಿಸುವುದು ನಮ್ಮ ಜವಾಬ್ದಾರಿಯಾಗಿದೆ.

ಜಗತ್ತಿನಲ್ಲಿ ಆಡಳಿತಕ್ಕಾಗಿ ಅತಿ ಹೆಚ್ಚು ಬಳಸುತ್ತಿರುವ ಭಾಷೆ ಇಂಗ್ಲೀಷ್. ಭಾರತದಲ್ಲಿ ಅತಿ ಹೆಚ್ಚು ಬಳಸುವ ಭಾಷೆಯೆಂದರೆ ಹಿಂದಿ. ಶೇ.44% ರಷ್ಟು ಜನರು ಆಡಳಿತಕ್ಕಾಗಿ ಬಳಸುತ್ತಾರೆ. ಭಾರತ ದೇಶದಲ್ಲಿ ಅತ್ಯಂತ ಸುಂದರವಾದ ಭಾಷೆ ಕನ್ನಡ. ಕನ್ನಡ ಭಾಷೆಯನ್ನು ಭಾಷೆಗಳ ರಾಣಿ ಎಂದು ಕೂಡ ಕರೆಯುತ್ತಾರೆ. ಬಂಗಾಳಿ, ಮರಾಠಿ, ತಮಿಳು ಹಾಗೂ ಮಲೆಯಾಳಂ ಈ ಐದು ಭಾಷೆಗಳೂ ಸುಂದರ ಭಾಷೆಗಳಾಗಿವೆ. ರಾಜ್ಯದಲ್ಲಿ ಅತೀ ಹೆಚ್ಚು ಹಿಂದಿ ಮತ್ತು ಇಂಗ್ಲೀಷ್ ಭಾಷೆಗಳ ಪ್ರಭಾವದಿಂದ ಕನ್ನಡ ಭಾಷೆ ಅಳಿವಿನ ಅಂಚಿನಲ್ಲಿದೆ. ಕನ್ನಡ ಭಾಷೆಯನ್ನು ಗೌರವಿಸಬೇಕು, ಪ್ರೀತಿಸಬೇಕು ಹಾಗೂ ಉಳಿಸಬೇಕು ಎಂದರು.

ನವೆಂಬರ್ 17, 1999ರಂದು ಯುನೆಸ್ಕೋ ತನ್ನ 30ನೇ ಸಾಮಾನ್ಯ ಸಭೆಯಲ್ಲಿ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾದ ಕೋಫಿ ಅನ್ನಾನ್ ರವರು 1952ರಲ್ಲಿ ಮಾತೃಭಾಷೆಗಾಗಿ ತಮ್ಮ ಪ್ರಾಣ ತ್ಯಾಗ ಮಾಡಿದ ಹುತಾತ್ಮರನ್ನು ಸ್ಮರಿಸಲು ಫೆಬ್ರವರಿ 21 ಅನ್ನು ಅಂತಾರಾಷ್ಟ್ರೀಯ ಮಾತೃಭಾಷಾ ದಿನವೆಂದು ಘೋಷಿಸಿದರು. 2000ನೇ ಇಸವಿಯಿಂದ ಪ್ರತಿ ವರ್ಷ ಫೆಬ್ರವರಿ 21 ಅನ್ನು ಅಂತಾರಾಷ್ಟ್ರೀಯ ಮಾತೃಭಾಷಾ ದಿನವನ್ನಾಗಿ ಆಚರಿಸಲಾಗುತ್ತದೆ ಎಂದು ತಿಳಿಸಿದರು.

ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯ ನಿರ್ದೇಶಕರಾದ ಶ್ರೀ ಸಿ. ರಮೇಶರವರು ಮಾತನಾಡಿ 2000ರಲ್ಲಿ ವಿಶ್ವಸಂಸ್ಥೆಯು ಫೆಬ್ರವರಿ 21 ಅನ್ನು ಅಂತಾರಾಷ್ಟ್ರೀಯ ಮಾತೃಭಾಷಾ ದಿನವೆಂದು ಘೋಷಣೆ ಮಾಡಿತು. ನಮ್ಮ ಭಾಷೆ, ಸಂಸ್ಕೃತಿಯನ್ನು ಉತ್ತೇಜಿಸಲು ಜೊತೆಗೆ ಬಹುಭಾಷಾ ಪದ್ಧತಿಯನ್ನು ಪ್ರೋತ್ಸಾಹಿಸಲು ಇದು ಪ್ರೇರಣೆಯಾಗಿದೆ. ನಮ್ಮ ದೇಶದಲ್ಲಿ ಪ್ರಾಂತ್ಯಗಳಿಗೆ ಅನುಗುಣವಾಗಿ ಭಾಷೆಗಳು ಬಳಕೆಯಾಗುತ್ತವೆ. ಹಾಗಾಗಿ ಎಲ್ಲಾ ಭಾಷೆಗಳನ್ನು ಗೌರವಿಸಿ ಎಂದು ಹೇಳಿದರು.

ನಂತರದಲ್ಲಿ ಅಸಿಸ್ಟೆಂಟ್ ಹ್ಯಾಂಡ್ ಎಂಬ್ರಾಯಿಡರಿ ಮತ್ತು ಅಸಿಸ್ಟೆಂಟ್ ಟೆಕ್ಸ್‌ಟೈಲ್ ಪ್ರಿಂಟಿಂಗ್ ತರಬೇತಿ ಪಡೆದ ಫಲಾನುಭವಿಗಳಿಗೆ ಪ್ರಮಾಣಪತ್ರ ವಿತರಣೆ ಮಾಡಲಾಯಿತು. ಶ್ರೀಮತಿ ಸುಷ್ಮಾ ಮತ್ತು ತಂಡದವರು ಪ್ರಾರ್ಥನೆ ಮಾಡಿದರು. ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯ ಸಹಾಯಕ ಕಾರ್ಯಕ್ರಮಾಧಿಕಾರಿಯಾದ ಶ್ರೀ ಆರ್. ಸುರೇಶಕುಮಾರ್‌ರವರು ಸ್ವಾಗತಿಸಿದರು. ಶ್ರೀಮತಿ ಡಿ. ಸೌಭಾಗ್ಯರವರು ಕಾರ್ಯಕ್ರಮ ನಿರೂಪಿಸಿ, ವಂದಿಸಿದರು. ಕಾರ್ಯಕ್ರಮದಲ್ಲಿ ವೃತ್ತಿ ಬೋಧಕರಾದ ಶ್ರೀಮತಿ ಗೀತಾ ಮತ್ತು ತರಬೇತಿಯ ಫಲಾನುಭವಿಗಳನ್ನೊಳಗೊಂಡಂತೆ ಸುಮಾರು 45 ಮಂದಿ ಭಾಗವಹಿಸಿದ್ದರು.



ಸುತ್ತೂರು ಶ್ರೀಮಠದಲ್ಲಿ ಜರುಗಿದ 131ನೇ ಮಾಸಿಕ ಸಾಮೂಹಿಕ ವಿವಾಹದಲ್ಲಿ ಒಂಬತ್ತು ಜೋಡಿಗಳು ಸತಿಪತಿಗಳಾದರು. ಚಿತ್ರದಲ್ಲಿ ಸಂಸ್ಥೆಯ ಆಡಳಿತಾಧಿಕಾರಿಗಳಾದ ಶ್ರೀ ಎಸ್.ಪಿ. ಉದಯಶಂಕರ್‌ರವರು, ಮುಖ್ಯಸ್ಥರು ಹಾಗೂ ಸಿಬ್ಬಂದಿ ವರ್ಗದವರಿದ್ದಾರೆ. (25 ಮಾರ್ಚ್ 2026)

## ಅಸಿಸ್ಟೆಂಟ್ ಡ್ರೆಸ್ ಮೇಕರ್ ತರಬೇತಿ ಸಮಾರೋಪ



**ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯ ವತಿಯಿಂದ ಮೈಸೂರು ನಗರದ ನಾಚನಹಳ್ಳಿ ಪಾಳ್ಯದ ಜೆಎಸ್‌ಎಸ್ ಪದವಿ ಪೂರ್ವ ಕಾಲೇಜಿನ ಕ್ಯಾಂಪಸ್‌ನಲ್ಲಿ** ದಿನಾಂಕ 14.11.2025 ರಿಂದ 24.2.2026ರವರೆಗೆ 80 ದಿನಗಳ ಕಾಲ ನಡೆದ ಅಸಿಸ್ಟೆಂಟ್ ಡ್ರೆಸ್ ಮೇಕರ್ ತರಬೇತಿಯ ಸಮಾರೋಪ ಸಮಾರಂಭ ಹಾಗೂ ಉದ್ಯೋಗಾವಕಾಶ ಕೌಶಲ್ಯದ ಬಗ್ಗೆ ಅರಿವು ಕಾರ್ಯಕ್ರಮವನ್ನು ದಿನಾಂಕ 18.2.2026ರಂದು ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಜೆಎಸ್‌ಎಸ್ ಮಹಾವಿದ್ಯಾಪೀಠದ ಶಾಲಾ ಶಿಕ್ಷಣ ವಿಭಾಗದ ಜಂಟಿ ನಿರ್ದೇಶಕರಾದ ಶ್ರೀ ಶಿವಮಾದಪ್ಪನವರು ಶಾಲೆ, ಕಂಪನಿ, ಸ್ತ್ರೀ ಶಕ್ತಿ ಸಂಘಗಳೊಂದಿಗೆ ಸಂಪರ್ಕ ಸಾಧಿಸಿ ಬಟ್ಟೆಗಳ ಆರ್ಡರ್ ತೆಗೆದುಕೊಂಡು ವೃತ್ತಿಯಲ್ಲಿ ನಿರತರಾಗಬೇಕು. ಮಾಡಬೇಕು, ಆ ಮೂಲಕ ಆರ್ಥಿಕವಾಗಿ ಸಬಲರಾಗಬೇಕು. ವೃಥಾ ಕಾಲಹರಣ ಮಾಡದೇ ಕೆಲಸದಲ್ಲಿ ನಿರತರಾಗಬೇಕು. ವೃತ್ತಿಯಲ್ಲಿ ಸಮಯ ಪರಿಪಾಲನೆ ಮಾಡಿ, ಉತ್ತಮ ರೀತಿಯಲ್ಲಿ ಕೌಶಲ್ಯ ಬೆಳೆಸಿಕೊಂಡರೆ ಜನರೇ ನಿಮ್ಮನ್ನು ಹುಡುಕಿಕೊಂಡು ಬರುತ್ತಾರೆ ಎಂದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಶಾಲಾ ಶಿಕ್ಷಣ ವಿಭಾಗದ ವಿಷಯ ಪರಿವೀಕ್ಷಕರಾದ ಶ್ರೀ ನಾಗರಾಜುರವರು ಮಾತನಾಡುತ್ತಾ, ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯ ತರಬೇತಿಗಳು ಉತ್ತಮವಾಗಿ ನಡೆಯುತ್ತಿವೆ. ತರಬೇತಿಗೆ ಬರುವ ಕಲಿಕಾರ್ಥಿಗಳ ಮನಸ್ಸಿನಲ್ಲಿ ಹಲವು ನೋವುಗಳಿದ್ದರೂ ಸಹ ನಗುನಗುತ್ತಾ ಇರುತ್ತಾರೆ. ಇಂದು ಹೊಲಿಗೆ ಎಂಬುದು ಸುಲಭವಾಗಿದೆ. ಕೆಲಸವನ್ನು ನೀವು ಕೈ ಬಿಟ್ಟರೂ ಕೆಲಸ ನಿಮ್ಮ ಕೈ ಬಿಡಲ್ಲ, ಸಮಯ ಪರಿಪಾಲನೆಗೆ ಹೆಚ್ಚು ಒತ್ತು ನೀಡಿ ಎಂದರು.

ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯ ನಿರ್ದೇಶಕರಾದ ಶ್ರೀ ಸಿ. ರಮೇಶರವರು ಜೆಎಸ್‌ಎಸ್ ಮಹಾವಿದ್ಯಾಪೀಠದ, ಜನ ಶಿಕ್ಷಣ ಸಂಸ್ಥೆಯ ಉದ್ದೇಶ, ವೃತ್ತಿ ತರಬೇತಿಗಳು ಹಾಗೂ ಮುಂದಿನ ದಿನಗಳಲ್ಲಿ ಕೈಗೊಳ್ಳಬಹುದಾದ ಆರ್ಥಿಕ ಚಟುವಟಿಕೆಗಳು ಬ್ಯಾಂಕ್‌ನ ಸಾಲ–ಸೌಲಭ್ಯ ಇತ್ಯಾದಿ ಬಗ್ಗೆ ತಿಳಿಸಿದರು.

ಶ್ರೀಮತಿ ಲಿಖಿತಾ ಮತ್ತು ತಂಡದವರು ಪ್ರಾರ್ಥಿಸಿದರು. ಶ್ರೀಮತಿ ರೇಖಾಮಣಿಯವರು ಸ್ವಾಗತಿಸಿದರು. ಶ್ರೀಮತಿ ಶ್ವೇತಾರವರು ವಂದಿಸಿದರು ಹಾಗೂ ಶ್ರೀಮತಿ ಪುಟ್ಟಲಕ್ಷ್ಮಿಯವರು ಕಾರ್ಯಕ್ರಮವನ್ನು ನಿರೂಪಿಸಿದರು.

ಅಸಿಸ್ಟೆಂಟ್ ಡ್ರೆಸ್ ಮೇಕರ್ ತರಬೇತಿಯ ಫಲಾನುಭವಿಗಳು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

## ಜೆಎಸ್‌ಎಸ್ ಮಹಾವಿದ್ಯಾಪೀಠದ ಆಶ್ರಯದಲ್ಲಿ ನಡೆಯುವ ಶಿಬಿರಗಳು 2026

1. 1–10 ಏಪ್ರಿಲ್ – ಸಂಸ್ಕೃತ ಸಂಭಾಷಣ ಶಿಬಿರ
   ಕೆಎಸ್‌ಎಸ್ ಸಂಸ್ಕೃತ ಪಾಠಶಾಲೆ, ಮೈಸೂರು
2. 3–24 ಏಪ್ರಿಲ್ – ಎಳೆಯರ ಮೇಳ
   ಜೆಎಸ್‌ಎಸ್ ಶಾಲಾ ಸಮುಚ್ಚಯ ಆವರಣ, ಸರಸ್ವತಿಪುರಂ, ಮೈಸೂರು
3. 3–25 ಏಪ್ರಿಲ್ – ಚಿತ್ರಕಲಾ ಶಿಬಿರ, ಜೆಎಸ್‌ಎಸ್ ಬಾಲಜಗತ್
   ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು
4. 4–6 ಏಪ್ರಿಲ್ – ಶಿಕ್ಷಕರ ಶಿಬಿರ, ಸುತ್ತೂರು ಶ್ರೀಕ್ಷೇತ್ರ
5. 7–11 ಏಪ್ರಿಲ್ – ಚಿಣ್ಣರ ಕೃಷಿ ಪಾಠ–ದೇಸಿ ಆಟ ಶಿಬಿರ
   ಕೃಷಿ ವಿಜ್ಞಾನ ಕೇಂದ್ರ, ಸುತ್ತೂರು ಶ್ರೀಕ್ಷೇತ್ರ
6. 8–10 ಏಪ್ರಿಲ್ – ಆಯುರ್ವೇದ, ವಾಕ್–ಶ್ರವಣ
   ನರ್ಸಿಂಗ್ ವಿದ್ಯಾರ್ಥಿಗಳ ಶಿಬಿರ, ಸುತ್ತೂರು ಶ್ರೀಕ್ಷೇತ್ರ
7. 12–14 ಏಪ್ರಿಲ್ – ಫಾರ್ಮಸಿ ಹಾಗೂ
   ಲೈಫ್ ಸೈನ್ಸ್ ವಿದ್ಯಾರ್ಥಿಗಳ ಶಿಬಿರ, ಸುತ್ತೂರು ಶ್ರೀಕ್ಷೇತ್ರ
8. 16–18 ಏಪ್ರಿಲ್ – ವೈದ್ಯಕೀಯ–ಸ್ನಾತಕೋತ್ತರ ಹಾಗೂ
   ದಂತವೈದ್ಯರ–ಹೌಸ್ ಸರ್ಜನ್‌ರ ಶಿಬಿರ, ಸುತ್ತೂರು ಶ್ರೀಕ್ಷೇತ್ರ
9. 22–24 ಏಪ್ರಿಲ್ – ವಿದ್ಯಾರ್ಥಿಗಳ ಶಿಬಿರ, ಸುತ್ತೂರು ಶ್ರೀಕ್ಷೇತ್ರ
   (ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳು)
10. 25–27 ಏಪ್ರಿಲ್ – ಯುವಜನರ ಶಿಬಿರ (ಪದವೀಧರರು)
    ಸುತ್ತೂರು ಶ್ರೀಕ್ಷೇತ್ರ
11. 28–30 ಏಪ್ರಿಲ್ – ತಾಂತ್ರಿಕ ವಿದ್ಯಾರ್ಥಿಗಳ ಶಿಬಿರ, ಸುತ್ತೂರು ಶ್ರೀಕ್ಷೇತ್ರ
12. 1–3 ಮೇ – ರೈತರ ಶಿಬಿರ, ಸುತ್ತೂರು ಶ್ರೀಕ್ಷೇತ್ರ
13. 6–11 ಮೇ – ಜೀವನೋತ್ಸಾಹ ಶಿಬಿರ, ಊಟಿ
    (ಸಾರ್ವಜನಿಕರು, ಯುವಕರು ಮತ್ತು ಮಕ್ಕಳು)
14. 14–19 ಮೇ – ಜೀವನೋತ್ಸಾಹ ಶಿಬಿರ, ಬಿಳಿಗಿರಿರಂಗನಬೆಟ್ಟ
    (ಸಾರ್ವಜನಿಕರು, ಯುವಕರು ಮತ್ತು ಮಕ್ಕಳು)
15. 21–25 ಮೇ – ಅಧ್ಯಯನ ಶಿಬಿರ, ಸುತ್ತೂರು ಶ್ರೀಕ್ಷೇತ್ರ
    (ಮಠಾಧಿಪತಿಗಳು, ಸಾಧಕರು ಹಾಗೂ ಆಧ್ಯಾತ್ಮಿಕ ಜಿಜ್ಞಾಸುಗಳು)

## ಮೃದು ಕೌಶಲ್ಯ ತರಬೇತಿ



**ಕೊಳ್ಳೇಗಾಲದ ಜೆಎಸ್ಎಸ್ ಮಹಿಳಾ ಕಾಲೇಜಿನಲ್ಲಿ** ಐಕ್ಯೂಎಸಿ ಮತ್ತು ಉದ್ಯೋಗ ಭರವಸೆ ಕೋಶದ ವತಿಯಿಂದ 23.2.2026 ರಿಂದ 27.2.2026ರವರೆಗೆ ನಡೆದ 5 ದಿನಗಳ ಮೃದು ಕೌಶಲ್ಯ ತರಬೇತಿ ಕಾರ್ಯಕ್ರಮದ ಸಮಾರೋಪ ಸಮಾರಂಭವನ್ನು ದಿನಾಂಕ 27.2.2026 ರಂದು ಆಯೋಜಿಸಲಾಗಿತ್ತು.

ಬೆಂಗಳೂರು ನಾಂದಿ ಫೌಂಡೇಷನ್ನಿನ ತರಬೇತುದಾರರಾದ ಶ್ರೀಮತಿ ಎಸ್. ಪ್ರೀತಿಲೇಖರವರು ವಿದ್ಯಾರ್ಥಿಗಳಿಗೆ ಬೋಧನೆ ಮಾಡುವುದು ನಮ್ಮ ಕರ್ತವ್ಯ. ಈ ಕಾರ್ಯಕ್ರಮದಲ್ಲಿ ಕಲಿತದ್ದನ್ನು ಇಲ್ಲಿಗೆ ಬಿಡದೆ ಜೀವನ ಪೂರ್ತಿ ಅಳವಡಿಸಿಕೊಳ್ಳಬೇಕು. ಓದು ಎಷ್ಟು ಮುಖ್ಯವೋ ನಮ್ಮ ಕೌಶಲ್ಯವು ಅಷ್ಟೇ ಮುಖ್ಯ. ವಿದ್ಯಾರ್ಥಿಗಳು ಸಮಯ ನಿರ್ವಹಣೆಗೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು. ಈ ಕೌಶಲ್ಯಗಳು ಈ ದಿನಕ್ಕೆ ಸೀಮಿತವಾಗದೆ ವಿಸ್ತಾರವಾಗಬೇಕು ಎಂದು ಹೇಳಿದರು.

ಐಕ್ಯೂಎಸಿ ಸಂಚಾಲಕರಾದ ಶ್ರೀಮತಿ ಎಸ್. ಮಮತರವರು ಸ್ಪರ್ಧಾತ್ಮಕ ಯುಗದಲ್ಲಿ ಈ ಕೌಶಲ್ಯಗಳು ಐದು ದಿನಕ್ಕೆ ಸೀಮಿತವಾಗುವುದಿಲ್ಲ. ಈ ತರಬೇತಿಯಲ್ಲಿ ಕಲಿತ ನಾಯಕತ್ವ ಗುಣವನ್ನು ಜೀವನ ಪರ್ಯಂತ ಅಳವಡಿಸಿಕೊಳ್ಳುವ ಹಿನ್ನೆಲೆಯಲ್ಲಿ ಇಂತಹ ತರಬೇತಿಗಳು ಬಹಳ ಪ್ರಾಮುಖ್ಯತೆ ಹೊಂದುತ್ತವೆ. ಇದರಿಂದ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಗೊಳ್ಳುತ್ತದೆ. ದಿನನಿತ್ಯದ ಜೀವನಕ್ಕೆ ತುಂಬಾ ಅಗತ್ಯವಾಗುತ್ತದೆ ಎಂದು ತಿಳಿಸಿದರು.

ಪ್ರಾಂಶುಪಾಲರಾದ ಡಾ. ಹೆಚ್.ಎಸ್. ಕೊಂಗಳಪ್ಪರವರು ಪದವಿ ಎನ್ನುವುದು ಪ್ರಮಾಣ ಪತ್ರಕ್ಕಷ್ಟೇ ಸೀಮಿತವಾಗುವುದಿಲ್ಲ. ಕೌಶಲ್ಯಗಳು ಜೀವನದಲ್ಲಿ ತುಂಬಾ ಅಗತ್ಯ. ಸಂವಹನ ಕೌಶಲ್ಯ ಆಧುನಿಕ ಜಗತ್ತಿನಲ್ಲಿ ತುಂಬಾ ಮುಖ್ಯವಾಗುತ್ತದೆ ಎಂದು ತಿಳಿಸಿದರು.

ಚಟುವಟಿಕೆಗಳಲ್ಲಿ ಉತ್ತಮವಾಗಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು. ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ನಾಂದಿ ಫೌಂಡೇಷನ್ನಿನ ಶ್ರೀಮತಿ ಅನಿತರಾಜ್ ಹಾಗೂ ಉದ್ಯೋಗ ಭರವಸೆ ಕೋಶದ ಸಂಚಾಲಕರಾದ ಶ್ರೀಮತಿ ಬಿ.ಆರ್. ಭವ್ಯರವರು ಉಪಸ್ಥಿತರಿದ್ದರು. ಅಂತಿಮ ಪದವಿ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.

## ಸಕ್ರಿಯ ಜೀವನಶೈಲಿಗೆ ಕ್ರೀಡೆ, ಯೋಗ ಮತ್ತು ಧ್ಯಾನ ಅವಶ್ಯಕ



**ನಂಜನಗೂಡಿನ ಜೆಎಸ್‌ಎಸ್ ಕಲಾ, ವಾಣಿಜ್ಯ ವಿಜ್ಞಾನ ಕಾಲೇಜಿನ** ವತಿಯಿಂದ ದಿನಾಂಕ 27.2.2026 ರಂದು 2025–2026ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯ ಕಬಿನಿ ವಲಯ ಅಂತರ–ಕಾಲೇಜು ಪುರುಷರ ಹಾಗೂ ಮಹಿಳೆಯರ ಬ್ಯಾಡ್ಮಿಂಟನ್, ಟೇಬಲ್ ಟೆನ್ನಿಸ್ ಮತ್ತು ಟೆನಿಕಾಯ್ಟ್ ಕ್ರೀಡಾಕೂಟವನ್ನು ಆಯೋಜಿಸಲಾಗಿತ್ತು.

ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದ ನಂಜನಗೂಡು ಪ್ರಥಮ ದರ್ಜೆ ಗುತ್ತಿಗೆದಾರರು ಹಾಗೂ ಸಮಾಜಸೇವಕರೂ ಆದ ಶ್ರೀ ಯು.ಎನ್. ಪದ್ಮನಾಭರಾವ್‌ರವರು ವಿದ್ಯಾರ್ಥಿ ದಿಸೆಯಲ್ಲಿ ನಾನು ಕ್ರೀಡಾಸಕ್ತಿಯನ್ನು ಹೊಂದಿದ್ದರ ಫಲವಾಗಿ ಮೂರು ಬಾರಿ ರಾಷ್ಟ್ರಮಟ್ಟದ ಕ್ರೀಡಾ ಪಂದ್ಯಾವಳಿಗಳಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿ ವಿಜೇತನಾಗಿದ್ದೇನೆ. ಇಂದಿನ ಯುವ ಪೀಳಿಗೆ ಕ್ರೀಡೆಯಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಬೇಕು. ಕ್ರೀಡೆಯಿಂದಾಗುವ ದೈಹಿಕ ಚಟುವಟಿಕೆಯ ಶಕ್ತಿ, ಸಹಿಷ್ಣುತೆ ಮತ್ತು ಶಿಸ್ತನ್ನು ಮನಗಂಡು ನಾಯಕತ್ವ ಮನೋಭಾವನೆಯನ್ನು ಹೊಂದಬೇಕು. ಯೋಗ ಮತ್ತು ಧ್ಯಾನದ ಮಹತ್ವವನ್ನು ಅರಿತು ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿಯಬೇಕು. ವಿವಿಧತೆಯಲ್ಲಿ ಏಕತೆಯನ್ನು ಜಗತ್ತಿಗೆ ನಿರೂಪಿಸಿರುವ ಭಾರತ ದೇಶದ ಹೆಸರನ್ನು ಜಾಗತಿಕ ಮಟ್ಟದಲ್ಲಿ ಉತ್ತುಂಗಕ್ಕೆ ಕೊಂಡೊಯ್ಯುವ ಸಾರ್ಥಕತೆಯ ಕ್ರೀಡಾ ಪ್ರತಿಭಾನ್ವಿತರಾಗಿ ಹೊರಹೊಮ್ಮಬೇಕು ಎಂದರು.

ತಿ. ನರಸಿಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರು ಹಾಗೂ ಕಬಿನಿ ವಲಯ ಕ್ರೀಡಾ ಕೂಟದ ಅಧ್ಯಕ್ಷರಾದ ಡಾ. ಹೆಚ್.ವಿ. ಉದಯ ಕುಮಾರರವರು ಮಾತನಾಡಿ, ಕ್ರೀಡಾಪಟುಗಳು ಭಾವನಾತ್ಮಕ ಸಂಬಂಧ ಹೊಂದಿ ಸಂಘಟನಾ ಚಾತುರ್ಯದೊಂದಿಗೆ ಸ್ಪರ್ಧಿಸಬೇಕು. ಆರೋಗ್ಯವೇ ಭಾಗ್ಯ ಎಂಬ ಸೂಕ್ತಿಯನ್ನು ಅರಿಯಬೇಕು. ಸಮಗ್ರ ಚಾಂಪಿಯನ್‌ಶಿಪ್ ಪಡೆದು ಕಾಲೇಜಿಗೆ ಕೀರ್ತಿ ತನ್ನಿ ಎಂದರು.

ಪ್ರಾಂಶುಪಾಲರಾದ ಡಾ. ಸಿ.ಎಸ್. ಹೊನ್ನೇಗೌಡರವರು ಮಾತನಾಡಿ ಗುರಿಮುಟ್ಟವಲ್ಲಿ ಕ್ರೀಡಾಪಟುಗಳು ಸದಾಕಾಲ ಶಿಸ್ತು, ಸಮಯಪ್ರಜ್ಞೆ ಹಾಗೂ ಸಾಮಾಜಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಮಾನಸಿಕ ಒತ್ತಡ, ಆತಂಕ ಮತ್ತು ಖಿನ್ನತೆಯಿಂದ ದೂರ ಇರಲು ಕ್ರೀಡೆ ಅವಶ್ಯಕ ಎಂದರು.

ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರಾದ ಶ್ರೀ ಕೆ.ಎನ್. ಶಿವಕುಮಾರ್, ಕಛೇರಿ ಅಧೀಕ್ಷಕರಾದ ಶ್ರೀ ಕೆ.ವಿ. ಸುಂದರರಾಜು, ವಿವಿಧ ಕಾಲೇಜುಗಳಿಂದ ಆಗಮಿಸಿದ್ದ ದೈಹಿಕ ಶಿಕ್ಷಣ ನಿರ್ದೇಶಕರು, ಕ್ರೀಡಾಪಟುಗಳು, ವಿದ್ಯಾರ್ಥಿಗಳು, ಅಧ್ಯಾಪಕರು ಹಾಗೂ ಅಧ್ಯಾಪಕೇತರರು ಪಾಲ್ಗೊಂಡಿದ್ದರು. ವಿದ್ಯಾರ್ಥಿನಿ ಕು. ಬಿಂದು ಮತ್ತು ತಂಡ ಪ್ರಾರ್ಥಿಸಿದರು. ದೈಹಿಕ ಶಿಕ್ಷಣ ನಿರ್ದೇಶಕ ಶ್ರೀ ಪಿ.ಎಂ. ವಿಕ್ರಮ್ ಸ್ವಾಗತಿಸಿದರು. ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀ ಆರ್. ರವಿತೇಜರವರು ವಂದಿಸಿದರು. ಹಾಗೂ ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಎಮ್.ಎನ್. ಜಯಶೀಲರವರು ನಿರೂಪಿಸಿದರು.

## ಚಾಂಪಿಯನ್ಸ್



ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ಕ್ರೀಡಾಪಟುಗಳು ದಿನಾಂಕ 26.2.2026 ಮತ್ತು 27.2.2026ರಂದು ನಡೆದ ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜುಗಳ ಚಾಮುಂಡಿ ವಲಯ ಮಹಿಳಾ ಕ್ರೀಡಾಕೂಟದಲ್ಲಿ ಭಾಗವಹಿಸಿ ಕಬಡ್ಡಿ, ಥ್ರೋಬಾಲ್ ಮತ್ತು ಬ್ಯಾಡ್ಮಿಂಟನ್‌ನಲ್ಲಿ ಪ್ರಥಮ, ಟೆನ್ನಿಕಾಯ್ಟ್, ಬಾಲ್ ಬ್ಯಾಡ್ಮಿಂಟನ್ ಮತ್ತು ವಾಲಿಬಾಲ್‌ನಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ಕ್ರೀಡಾಪಟುಗಳನ್ನು ಅಕಾಡೆಮಿಕ್ ಕೌನ್ಸಿಲ್‌ನ ಸದಸ್ಯರಾದ ಡಾ. ಸಿ. ನಾಗಣ್ಣ, ವಿಶ್ರಾಂತ ಇಂಗ್ಲಿಷ್ ಪ್ರಾಧ್ಯಾಪಕರಾದ ಡಾ. ಕೆ. ರಾಮಚಂದ್ರ ಕಿಣಿ, ಮೈಸೂರು ವಿಶ್ವವಿದ್ಯಾನಿಲಯ ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷರಾದ ಚಾರ್ಟರ್ಡ್ ಅಕೌಂಟೆಂಟ್ ಶ್ರೀ ಶಿವಾನಂದ, ಕಾಲೇಜಿನ ಪ್ರಾಂಶುಪಾಲರಾದ ಡಾ. ರೇಚಣ್ಣ, ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀಮತಿ ಎ. ರಶ್ಮಿ, ಅಧ್ಯಾಪಕ ಮತ್ತು ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.

# ಬುಡಕಟ್ಟು ಕಲಾವಿದರ ಪುತ್ರಿಗೆ ಊಟಿಯ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನಲ್ಲಿ ಉಚಿತ ಪ್ರವೇಶ



ನೀಲಗಿರಿಯ ಜಿಲ್ಲಾಧಿಕಾರಿಗಳಾದ ಶ್ರೀಮತಿ ಲಕ್ಷ್ಮೀ ಭವ್ಯ ತನ್ನೀರುರವರು ವಿದ್ಯಾರ್ಥಿನಿ ಕೆ. ವಾಸುಕಿಯವರಿಗೆ ಊಟಿ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪ್ರವೇಶಾತಿ ಪತ್ರವನ್ನು ವಿತರಿಸಿದರು. ಪ್ರಾಂಶುಪಾಲರಾದ ಶ್ರೀ ಎಸ್.ಪಿ. ಧನಬಾಲ್, ಆಡಳಿತಾಧಿಕಾರಿಗಳಾದ ಶ್ರೀ ಬಸವಲಿಂಗದೇವರು ಮೊದಲಾದವರುಗಳಿದ್ದಾರೆ. (29 ಜನವರಿ 2026)

ತಮಿಳುನಾಡಿನ ಕುರುಂಬ ಬುಡಕಟ್ಟು ಜನಾಂಗದ ಕಲಾವಿದರಾಗಿದ್ದ ದಿವಂಗತ ಶ್ರೀ ಆರ್. ಕೃಷ್ಣನ್‌ರವರಿಗೆ ಕೇಂದ್ರ ಸರ್ಕಾರವು 2026ರಲ್ಲಿ ಮರಣೋತ್ತರವಾಗಿ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿದೆ. ದಿವಂಗತ ಶ್ರೀ ಆರ್. ಕೃಷ್ಣನ್‌ರವರ ಪುತ್ರಿ ಕೆ. ವಾಸುಕಿಯವರು ಹೈಯರ್ ಸೆಕೆಂಡರಿ ಶಿಕ್ಷಣವನ್ನು ಪೂರ್ಣಗೊಳಿಸಿ ಔಷಧವಿಜ್ಞಾನ ವಿಷಯದಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸುವ ಕನಸನ್ನು ಕಟ್ಟಿಕೊಂಡಿದ್ದರು. ತಂದೆಯವರ ನಿಧನ ಅವರ ಅಧ್ಯಯನಕ್ಕೆ ಅಡ್ಡಿಯಾಯಿತು. ವಿಷಯ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಅದನ್ನು ಗಮನಿಸಿದ ನೀಲಗಿರಿಯ ಜಿಲ್ಲಾಧಿಕಾರಿಗಳಾದ ಶ್ರೀಮತಿ ಲಕ್ಷ್ಮೀ ಭವ್ಯ ತನ್ನೀರುರವರು ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡುವಂತೆ ಊಟಿಯಲ್ಲಿರುವ ಜೆಎಸ್‌ಎಸ್ ಫಾರ್ಮಸಿ ಕಾಲೇಜು ಸಂಸ್ಥೆಯನ್ನು ಸಂಪರ್ಕಿಸಿದರು. ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರಿಗೆ ವಿಷಯ ತಿಳಿದು ಬೋಧನಾ ಮತ್ತು ವಸತಿನಿಲಯದ ಯಾವುದೇ ಶುಲ್ಕವನ್ನೂ ಪಡೆಯದೆ ವಿದ್ಯಾರ್ಥಿನಿಗೆ ಅಧ್ಯಯನಕ್ಕೆ ಪ್ರವೇಶ ನೀಡುವಂತೆ ಸೂಚಿಸಿದರು. ಅದರಂತೆ ವಿದ್ಯಾರ್ಥಿನಿಗೆ ಉಚಿತವಾಗಿ ಊಟಿಯ ಜೆಎಸ್‌ಎಸ್ ಫಾರ್ಮಸಿ ಕಾಲೇಜಿಗೆ ಪ್ರವೇಶಾತಿ ನೀಡಲಾಗಿದೆ. ಅವರ ತಾಯಿಯವರಾದ ಶ್ರೀಮತಿ ಸುಶೀಲಾರವರು ಮಗಳ ಶಿಕ್ಷಣಕ್ಕೆ ಅವಕಾಶ ಮಾಡಿಕೊಟ್ಟಿರುವುದಕ್ಕಾಗಿ ಪೂಜ್ಯ ಶ್ರೀಗಳವರಿಗೆ, ಜೆಎಸ್‌ಎಸ್ ಮಹಾವಿದ್ಯಾಪೀಠ ಮತ್ತು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಅಧಿಕಾರಿಗಳಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಿದ್ದಾರೆ.

## ಜೆಎಸ್‌ಎಸ್ ಪದವಿ ಕಾಲೇಜಿಗೆ ಬಹುಮಾನ



ಮೈಸೂರು ವಿಶ್ವವಿದ್ಯಾನಿಲಯ ಆಯೋಜಿಸಿದ್ದ 2025–26 ನೇ ಸಾಲಿನ ಚಾಮುಂಡಿ ವಲಯದ ಅಂತರ ಕಾಲೇಜುಗಳ ಕ್ರೀಡಾಕೂಟದಲ್ಲಿ ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿ ಪುರುಷರ ಸಾಫ್ಟ್‌ಬಾಲ್‌ನಲ್ಲಿ ಪ್ರಥಮ, ಕ್ರಿಕೆಟ್ ಮತ್ತು ಹ್ಯಾಂಡ್‌ಬಾಲ್ ಪಂದ್ಯಾವಳಿಗಳಲ್ಲಿ ದ್ವಿತೀಯ ಸ್ಥಾನವನ್ನು ಗಳಿಸಿ ಅಂತರ ವಲಯ ಸ್ಪರ್ಧೆಗಳಿಗೆ ಆಯ್ಕೆಯಾಗಿರುತ್ತಾರೆ.



ಜೆಎಸ್‌ಎಸ್ ಸರಸ್ವತಿ ಪುರಂ ಮಹಿಳಾ ಕಾಲೇಜು ಆಯೋಜಿಸಿದ್ದ 2025–26 ನೇ ಸಾಲಿನ ಚಾಮುಂಡಿ ವಲಯದ ಅಂತರ ಕಾಲೇಜುಗಳ ಮಹಿಳೆಯರ ಕ್ರೀಡಾಕೂಟದಲ್ಲಿ ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿ ಟೆನ್ನಿಕಾಯ್ಟ್ ಸ್ಪರ್ಧೆಯಲ್ಲಿ ಪ್ರಥಮ ಮತ್ತು ಥ್ರೋಬಾಲ್‌ನಲ್ಲಿ ದ್ವಿತೀಯ ಸ್ಥಾನವನ್ನು ಗಳಿಸಿ ಅಂತರ ವಲಯ ಸ್ಪರ್ಧೆಗೆ ಆಯ್ಕೆಯಾಗಿರುತ್ತಾರೆ.

ವಿಜೇತ ಕ್ರೀಡಾಪಟುಗಳನ್ನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯ, ಪ್ರಾಂಶುಪಾಲರಾದ ಡಾ. ಎಂ. ಪ್ರಭು, ದೈಹಿಕ ಶಿಕ್ಷಣ ನಿರ್ದೇಶಕರುಗಳಾದ ಶ್ರೀ ಎಂ. ಕಾರ್ತಿಕ್, ಶ್ರೀ ಸಿ.ಎಸ್. ನಿರಂಜನ್ ಹಾಗೂ ಬೋಧಕ, ಬೋಧಕೇತರರು ಅಭಿನಂದಿಸಿದ್ದಾರೆ.

# ಕ್ಯಾನ್ಸರ್ ಆರೈಕೆ ಕುರಿತು ರಾಷ್ಟ್ರಮಟ್ಟದ ವಿಚಾರಸಂಕಿರಣ



**ಮೈಸೂರಿನ ಜೆಎಸ್ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ**, ಕಾಯಚಿಕಿತ್ಸೆ ಸ್ನಾತಕೋತ್ತರ ಅಧ್ಯಯನ ವಿಭಾಗ ಮತ್ತು ಮೆಡಿಕಲ್ ಎಜುಕೇಶನ್ ಟೆಕ್ನಾಲಜಿ ಸೆಲ್ ವತಿಯಿಂದ ಕೊಟ್ಟೆಕಲ್ ಆರ್ಯ ವೈದ್ಯಶಾಲಾ ಸಹಯೋಗದಲ್ಲಿ ದಿನಾಂಕ 24.2.2026ರಂದು ವಿಶ್ವ ಕ್ಯಾನ್ಸರ್ ದಿನದ ಅಂಗವಾಗಿ ಕ್ಯಾನ್ಸರ್ ಆರೈಕೆಯ ಸಮಗ್ರ ವಿಧಾನ ವಿಷಯದ ಮೇಲೆ ರಾಷ್ಟ್ರಮಟ್ಟದ ನಿರಂತರ ವೈದ್ಯಕೀಯ ಶಿಕ್ಷಣ ಹಾಗೂ ನಿಯತಿ –2026 ಅಧ್ಯಾಪಕ ಅಭಿವೃದ್ಧಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಜೆಎಸ್ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಆಂಕಾಲಜಿ ಶಸ್ತ್ರಚಿಕಿತ್ಸಾ ವಿಭಾಗದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾದ ಡಾ. ರವಿಕೃಷ್ಣಪ್ಪರವರು ಮಾತನಾಡಿ, ಆಯುರ್ವೇದ ಕ್ಲಿನಿಕಲ್ ಸಂಶೋಧನೆಗಳು ಸಮಗ್ರ ಕ್ಯಾನ್ಸರ್ ಆರೈಕೆಗೆ ಮಹತ್ತರ ಕೊಡುಗೆ ನೀಡಬಹುದು. ರೋಗಿಗಳ ಜೀವನಮಟ್ಟವನ್ನು ಹೆಚ್ಚಿಸುವ ಉದ್ದೇಶದಿಂದ ಸಮಗ್ರ ಆಂಕಾಲಜಿ ಚಿಕಿತ್ಸಾ ಮಾರ್ಗಸೂಚಿಗಳನ್ನು ರೂಪಿಸುವಲ್ಲಿ ಪರಸ್ಪರ ಸಹಕಾರ ಅಗತ್ಯವಿದೆ ಎಂದು ಹೇಳಿದರು.

ಕೊಟ್ಟೆಕಲ್ ಆರ್ಯ ವೈದ್ಯ ಶಾಲಾ ಮುಖ್ಯ ವೈದ್ಯಾಧಿಕಾರಿಯಾದ ಡಾ. ಕೆ.ಎಂ. ಮಧುರವರು ಕ್ಯಾನ್ಸರ್ ರೋಗಿಗಳ ನಿರ್ವಹಣೆಯಲ್ಲಿ ಸಂಸ್ಥೆಯ ಸಂಶೋಧನೆ ಹಾಗೂ ನವೀನ ಪ್ರಯತ್ನಗಳ ಬಗ್ಗೆ ವಿವರಿಸಿದರು. ಅಲ್ಲದೆ, ಆರ್ಯ ವೈದ್ಯಶಾಲಾ ಚಾರಿಟೇಬಲ್ ಆಸ್ಪತ್ರೆಯ 100 ವರ್ಷಗಳ ಮಾನವೀಯ ಸೇವೆ ಕುರಿತು ಮಾತನಾಡಿದರು.

ಪ್ರಾಂಶುಪಾಲರಾದ ಡಾ. ಸರ್ಬೇಶ್ವರಕರ್‌ರವರು ಪ್ರಧಾನಮಂತ್ರಿಗಳ 2030ರೊಳಗೆ ಸಮಗ್ರ ಆರೋಗ್ಯ ಸೇವೆಯ ಕನಸನ್ನು ಉಲ್ಲೇಖಿಸಿ, ಸಮಗ್ರ ಆಂಕಾಲಜಿ ವಿಧಾನಗಳ ಅವಶ್ಯಕತೆಯನ್ನು ವಿವರಿಸಿದರು. ರೋಗಿ ಆರೈಕೆಯಲ್ಲಿ ಮಾನವೀಯ ಅಂತಃಕರಣದ 'ಹೀಲಿಂಗ್

ಟಚ್' ಬೆಳೆಸಿಕೊಳ್ಳುವಂತೆ ಅವರು ಪ್ರತಿನಿಧಿಗಳಿಗೆ ಕರೆ ನೀಡಿದರು. ಆಯೋಜನಾ ಕಾರ್ಯದರ್ಶಿ ಡಾ. ಸಿ. ದೀಪಾ ಪಾಟೀಲ್‌ರವರು ಸ್ವಾಗತಿಸಿದರು.

ಅಧಿವೇಶನಗಳಲ್ಲಿ ಆಧುನಿಕ ವೈದ್ಯಕೀಯ ಹಾಗೂ ಆಯುರ್ವೇದ ತಜ್ಞರು ಸಮಗ್ರ ಕ್ಯಾನ್ಸರ್ ಆರೈಕೆಯ ವಿವಿಧ ಆಯಾಮಗಳನ್ನು ಚರ್ಚಿಸಿದರು. ಡಾ. ಶಕುಂತಲಾ ಜೆ. ಪಾಟೀಲ್ ಅವರು ರಸೌಷಧಿಗಳು ಮತ್ತು ಆಯುರ್ವೇದದ ಕ್ಲಿನಿಕಲ್ ದೃಷ್ಟಿಕೋನವನ್ನು ವಿವರಿಸಿದರು. ಮೈಸೂರಿನ ಭಾರತ್ ಆಸ್ಪತ್ರೆ ಮತ್ತು ಇನ್ಸ್ಟಿಟ್ಯೂಟ್ ಆಫ್ ಆಂಕಾಲಜಿಯ ರೇಡಿಯೇಶನ್ ಆಂಕಾಲಜಿಸ್ಟ್ ಡಾ. ಸಹನಾ ಗಣೇಶ್ ಅವರು ತಲೆ–ಕುತ್ತಿಗೆ ಹಾಗೂ ಜೀರ್ಣಾಂಗ ಮಾರ್ಗದ ಕ್ಯಾನ್ಸರ್‌ಗಳಲ್ಲಿ ರೇಡಿಯೋಥೆರಪಿ: ಸಮಗ್ರತೆಯ ಅವಕಾಶಗಳು ಎಂಬ ವಿಷಯದ ಮೇಲೆ ಉಪನ್ಯಾಸ ನೀಡಿ, ರೇಡಿಯೋಥೆರಪಿ ನಿರ್ವಹಣೆಯಲ್ಲಿ ಆಯುರ್ವೇದದ ಪಾತ್ರವನ್ನು ವಿವರಿಸಿದರು.

ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಪೆಥಾಲಜಿ ವಿಭಾಗದ ಪ್ರಾಧ್ಯಾಪಕರಾದ ಡಾ. ಎಚ್.ಬಿ. ಶಶಿಧರ್‌ರವರು ಕ್ಯಾನ್ಸರ್‌ನ ಆರಂಭಿಕ ಪತ್ತೆ ಮತ್ತು ತಡೆಗಟ್ಟುವಿಕೆಯಲ್ಲಿ ಬಯೋಮಾರ್ಕರ್‌ಗಳ ಮಹತ್ವವನ್ನು ವಿವರಿಸಿದರು. ಸಿಎಸ್‌ಐಆರ್–ಸಿಎಫ್‌ಟಿಆರ್‌ಐನ ಪ್ರೊ. ಸಯ್ಯದ್ ಮುಸ್ತಫಾ ಮೀರಾನ್‌ರವರು ಆಹಾರ ಕ್ರಮಗಳು ಮತ್ತು ಎಪಿಜೆನೆಟಿಕ್ ರೀಪ್ರೋಗ್ರಾಮಿಂಗ್ ಕುರಿತು, ವಿಶೇಷವಾಗಿ ಟ್ರಿಪಲ್ ನೆಗಟಿವ್ ಬ್ರೆಸ್ಟ್ ಕ್ಯಾನ್ಸರ್ ಮತ್ತು ಅದರ ಆಯುರ್ವೇದೀಯ ಸಂಬಂಧ ಕುರಿತು ವಿಶ್ಲೇಷಣೆ ನೀಡಿದರು.

ಸಮಾರೋಪ ಅಧಿವೇಶನದಲ್ಲಿ ಕಾಯಚಿಕಿತ್ಸೆ ಸ್ನಾತಕೋತ್ತರ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ಎಂ.ಡಿ. ಬೀನರವರು ಮುಂದುವರೆದ ಹಂತದ ಕ್ಯಾನ್ಸರ್ ರೋಗಿಗಳಲ್ಲಿ ಆಯುರ್ವೇದದ ಶೋಧನ ಮತ್ತು ರಸಾಯನ ಚಿಕಿತ್ಸೆಗಳ ಸಹಾಯಕ ಪಾತ್ರ ಹಾಗೂ ಜೀವನಮಟ್ಟದ ವೃದ್ಧಿಯಲ್ಲಿ ಅದರ ಮಹತ್ವವನ್ನು ವಿವರಿಸಿದರು.

ಕಾರ್ಯಕ್ರಮದಲ್ಲಿ ದೇಶದ ವಿವಿಧ ಭಾಗಗಳಿಂದ 200ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ಒಟ್ಟು 95 ವೈಜ್ಞಾನಿಕ ಲೇಖನಗಳು ಸ್ವೀಕರಿಸಲ್ಪಟ್ಟಿದ್ದು, ಅವುಗಳಲ್ಲಿ 27 ಉತ್ತಮ ಲೇಖನಗಳಿಗೆ ಬಹುಮಾನ ಪತ್ರಗಳನ್ನು ಪ್ರದಾನ ಮಾಡಲಾಯಿತು. ಸಮಾರೋಪ ಸಮಾರಂಭದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಆರ್. ಮಹೇಶ್‌ರವರು ಬಹುಮಾನ ಪತ್ರಗಳನ್ನು ವಿತರಿಸಿದರು.

**ಜೆಎಸ್‌ಎಸ್ ವಾರ್ತಾಪತ್ರಕ್ಕೆ ಕಳುಹಿಸುವ**
**ವರದಿಗಳು ಮತ್ತು ಛಾಯಚಿತ್ರಗಳನ್ನು ಕಡ್ಡಾಯವಾಗಿ**
**varthapathra@jssonline.org ಗೆ ಮಾತ್ರ ಕಳುಹಿಸುವುದು.**
**ಬೇರೆ ಯಾವುದೇ ಇಮೇಲ್‌ಗೆ ಕಳುಹಿಸಬಾರದು.**

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ**
**ಪ್ರಕಟಣ ವಿಭಾಗ, ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು**
**ದೂರವಾಣಿ : 9663151846, 9480771995**
**8861654566, 9964161363**

## ಶರಣರ ವಿಚಾರಧಾರೆ ಸಮಾಜಕ್ಕೆ ದಾರಿದೀಪ




**ನಂಜನಗೂಡು ಜೆಎಸ್‌ಎಸ್ ಕಾಲೇಜಿನಲ್ಲಿ** ಕನ್ನಡ ವಿಭಾಗ ಮತ್ತು ಆಂತರಿಕ ಗುಣಮಟ್ಟ ಭರವಸೆ ಘಟಕದ ಸಹಯೋಗದೊಂದಿಗೆ ಶರಣರ ವಿಚಾರಧಾರೆ – ಒಂದು ಅವಲೋಕನ ಎಂಬ ವಿಷಯದ ಬಗ್ಗೆ ದಿನಾಂಕ 25.02.2026ರಂದು ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಸಾಹಿತಿಗಳಾದ ಶ್ರೀ ನಗರ್ಲೆ ಶಿವಕುಮಾರರವರು ಮಾತನಾಡಿ, 12ನೇ ಶತಮಾನದ ನಂತರ ಹರಿಹರ ಪಾಲ್ಕುರಿಕೆ ಸೋಮನಾಥರಿಂದ ಆರಂಭವಾದ ವಚನ ಪರಂಪರೆ ಮನೆಮನೆಗಳಲ್ಲಿ ಹರಡಿದರೂ ನಂತರದ ಶತಮಾನಗಳಲ್ಲಿ ಅದರ ಬೆಳಕು ಮತ್ತಷ್ಟು ವಿಸ್ತರಿಸಿತು. ಎಡೆಯೂರು ಸಿದ್ದಲಿಂಗೇಶ್ವರರು ಹಾಗೂ ಸುತ್ತೂರು ಶ್ರೀ ಮಠದ ಘನಲಿಂಗಿ ಶಿವಯೋಗಿಗಳವರ ಕೊಡುಗೆ ಈ ದಿಸೆಯಲ್ಲಿ ಘನವಾದುದು. ಈ ಸಾಹಿತ್ಯ ಪರಂಪರೆ ಕೇವಲ ಭಕ್ತಿ ಸಾಹಿತ್ಯವಲ್ಲ, ಸಾಮಾಜಿಕ ಜಾಗೃತಿಯ ಘೋಷವಾಗಿತ್ತು.

ವಚನ ಪಿತಾಮಹ ಫ.ಗು. ಹಳಕಟ್ಟಿಯವರು ಮನೆಮನೆಗೆ ತೆರಳಿ ವಚನಗಳನ್ನು ಸಂಗ್ರಹಿಸಿ ಪ್ರಕಟಿಸಿ ವಚನ ಸಾಹಿತ್ಯಕ್ಕೆ ಹೊಸ ಜೀವ ತುಂಬಿದರು. 12ನೇ ಶತಮಾನದಲ್ಲಿ ಬಸವಾದಿ ಶರಣರು ಯಾವುದೇ ಜಾತಿ–ಭೇದವಿಲ್ಲದೆ ಅನುಭವ ಮಂಟಪವನ್ನು ಸ್ಥಾಪಿಸಿ ಸಾಮಾನ್ಯ ಜನತೆಗೆ ಅರ್ಥವಾಗುವ ಸರಳ ಕನ್ನಡದಲ್ಲಿ ವಚನಗಳನ್ನು ರಚಿಸಿ ಸಮಾಜ ಪರಿವರ್ತನೆಗೆ ದಾರಿ ತೋರಿದ್ದಾರೆ. 12ನೇ ಶತಮಾನದಲ್ಲಿಯೇ ಸ್ತ್ರೀ ಸಮಾನತೆಯ ಸಂದೇಶ ನೀಡಲ್ಪಟ್ಟಿದ್ದು, ತೊಟ್ಟಿಲು ತೂಗುವ ಕೈ ಜಗತ್ತನ್ನೇ ಆಳಬಲ್ಲುದು ಎಂಬುದು ಮಹಿಳಾ ಗೌರವದ ಪ್ರತೀಕವಾಗಿದೆ ಎಂದು ಹೇಳಿದರು.

ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಕೆ.ಎನ್. ಶಿವಕುಮಾರ್‌ರವರು ಬಸವಣ್ಣನವರ ವಿಚಾರಧಾರೆಗಳು ಸಮಾನತೆ, ಕಾಯಕ, ದಾಸೋಹ, ಅಹಿಂಸೆ ಹಾಗೂ ಮಾನವತಾವಾದದ ಮೇಲೆ ಆಧಾರಿತವಾಗಿವೆ. ಕಾಯಕವೇ ಕೈಲಾಸ ಎಂಬ ಸಂದೇಶದ ಮೂಲಕ ದುಡಿಮೆಗೆ ಗೌರವ ನೀಡಿದ ಬಸವಣ್ಣ ಜಾತಿ–ಲಿಂಗ ತಾರತಮ್ಯವನ್ನು ತಿರಸ್ಕರಿಸಿ ಸಮಾನತೆಯ ಸಮಾಜ

ನಿರ್ಮಾಣಕ್ಕೆ ಪ್ರಯತ್ನಿಸಿದರು. ವಚನಗಳು ಸರಳ ಕನ್ನಡದಲ್ಲಿ ನೈತಿಕ ಬದುಕಿನ ದಾರಿಯನ್ನು ತೋರಿಸುವ ಶಾಶ್ವತ ಮೌಲ್ಯಗಳನ್ನು ಒಳಗೊಂಡಿವೆ ಎಂದರು.

